ಸಂಪುಟ 7
ಸಂಚಿಕೆ 9
ಸೆಪ್ಟೆಂಬರ್ 2010

# ಸ್ವಾಭಿಮಾನಿ ಸಹಕಾರಿ

ಕರ್ನಾಟಕ ರಾಜ್ಯ
ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ

ರೂ. 5
ವಾರ್ಷಿಕ ಚಂದಾ ರೂ 50/-



## ಶ್ರೀ ಕೃಷ್ಣ ಜನ್ಮಾಷ್ಟಮಿ ಹಾಗೂ
## ಗೌರಿ-ಗಣೇಶ ಹಬ್ಬದ ಹಾರ್ದಿಕ ಶುಭಾಶಯಗಳು

– ಅಧ್ಯಕ್ಷರು ಹಾಗೂ ಆಡಳಿತ ಮಂಡಳಿ, ಸೌಹಾರ್ದ ಸಂಯುಕ್ತ ಸಹಕಾರಿ.

ಒಳಪುಟಗಳಲ್ಲಿ...


ಅಧ್ಯಕ್ಷರ ನುಡಿ
ಪುಟ – 2


ಬೆಳಗಾವಿಯಲ್ಲಿ ಜಿಲ್ಲೆ ಸೌಹಾರ್ದ ಸಹಕಾರಿಗಳ ಅವಲೋಕನಾ ಸಭೆ
ಪುಟ – 3


ಇ–ಸ್ಟಾಂಪಿಂಗ್ ಪುಟ – 6,7

ಸಂಯುಕ್ತ ಸಹಕಾರಿಯ ಸಮಾಚಾರ : ಪುಟ – 04
ಸೌಹಾರ್ದ ಸಹಕಾರಿ ಸಮಾಚಾರಗಳು : ಪುಟ – 08
ಕಾರ್ಕಳದಲ್ಲಿ ಸೌಹಾರ್ದ ಸಹಕಾರಿ ಪ್ರಾರಂಭ : ಪುಟ – 10
ಶ್ರೇಷ್ಠ ಸಹಕಾರಿ : ಪುಟ – 12
ಭ್ರಮರಾಂಬ ಪತ್ತಿನ ಸೌಹಾರ್ದ ಸಹಕಾರಿ : ಪುಟ – 05
ಕಚೇರಿ ಆಡಳಿತ ಮತ್ತು ಕಡತ ನಿರ್ವಹಣೆ (ಲೇಖನ) : ಪುಟ – 09
ಪ್ರಗತಿ ಪಥದಲ್ಲಿ ಬಾಪೂಜಿ ಪತ್ತಿನ ಸೌಹಾರ್ದ ಸಹಕಾರಿ : ಪುಟ –11

ಸೌಹಾರ್ದ ಸಹಕಾರಿಗಳ ಸಂಖ್ಯೆ 1442

## ಅಧ್ಯಕ್ಷರ ನುಡಿ

# ದಶಮಾನೋತ್ಸವ ಕಾರ್ಯಕ್ರಮಗಳು ಪರಿಣಾಮಕಾರಿಯಾಗಿ ಜರುಗಲಿ

ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳಿಗೆ ಶ್ರೀ ಕೃಷ್ಣ ಜನ್ಮಾಷ್ಟಮಿ ಹಾಗೂ ಗೌರಿ ಗಣೇಶ ಹಬ್ಬದ ಶುಭಾಶಯಗಳು.

ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಕ್ಷೇತ್ರ ಪ್ರಾರಂಭವಾಗಿ **10** ನೇ ವರ್ಷಕ್ಕೆ ಕಾಲಿರಿಸಿದೆ. ದಶಮಾನೋತ್ಸವ ಆಚರಣೆಗೆ ಸಿದ್ಧತೆ ನಡೆಸಿದೆ. ರಾಜ್ಯದ ಸಂಯುಕ್ತ ಸಹಕಾರಿಯ ನೇತೃತ್ವದಲ್ಲಿ ದಶಮಾನೋತ್ಸವ ಕಾರ್ಯಕ್ರಮಗಳನ್ನು ರಾಜ್ಯದ ಮುಖ್ಯಮಂತ್ರಿ ಶ್ರೀ ಬಿ.ಎಸ್.ಯಡಿಯೂರಪ್ಪನವರು ಬೆಳಗಾವಿಯಲ್ಲಿ ಉದ್ಘಾಟಿಸಿ ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆಗೆ ತಮ್ಮ ಸಂಪೂರ್ಣ ಬೆಂಬಲ ವ್ಯಕ್ತ ಪಡಿಸಿದ್ದಾರೆ. ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಸಹಕಾರ ಮಂತ್ರಿ ಶ್ರೀ ಲಕ್ಷ್ಮಣ ಸವದಿಯವರು ಎಲ್ಲ ವಿಧವಾದ ಪ್ರೋತ್ಸಾಹ ನೀಡುವುದಾಗಿ ತಿಳಿಸಿದ್ದಾರೆ. ಅನೇಕ ಸೌಹಾರ್ದ ಸಹಕಾರಿಗಳು ದಶಮಾನೋತ್ಸವ ಆಚರಣೆಗೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದಕ್ಕಾಗಿ ಸಂಯುಕ್ತ ಸಹಕಾರಿಯನ್ನು ಸಂಪರ್ಕಿಸುತ್ತಿವೆ. ಇದೊಂದು ಉತ್ತಮ ಹಾಗೂ ಆಶಾದಾಯಕ ಹಾಗೂ ಸಂತೋಷಕರ ಬೆಳವಣಿಗೆ.



ಸೌಹಾರ್ದ ಸಹಕಾರಿಗಳು ದಶಮಾನೋತ್ಸವವನ್ನು ಆಚರಿಸಬೇಕಾದ ಸಂದರ್ಭದಲ್ಲಿ ಕೆಲವು ಅಂಶಗಳನ್ನು ಮರೆಯದೆ ಗಮನಿಸಬೇಕಾಗುತ್ತದೆ. ಸೌಹಾರ್ದ ಸಹಕಾರಿ ಕ್ಷೇತ್ರದ ಬಗ್ಗೆ ಸಾರ್ವಜನಿಕರ ಅಭಿಪ್ರಾಯ ಸಕಾರಾತ್ಮಕವಾಗಿರಬೇಕು. ಸೌಹಾರ್ದ ಸಹಕಾರಿಯ ಬೆಳವಣಿಗೆಗೆ ಅಭಿವೃದ್ಧಿಗೆ ಪೂರಕ ವಿಷಯಗಳ ಕ್ರೋಢೀಕರಣ ಹಾಗೂ ಅವುಗಳ ಬಗ್ಗೆ ಸಾರ್ವಜನಿಕರಿಗೆ ತಿಳಿಸುವುದು, ಸರಕಾರದ ಹಾಗೂ ಅಧಿಕಾರಿಗಳ ಜೊತೆಗೆ ಉತ್ತಮ ಬಾಂಧವ್ಯ, ಪರಿಸರದಲ್ಲಿರುವ ಇತರೆ ಸಹಕಾರಿ ಸಂಸ್ಥೆಗಳ ಬಗ್ಗೆ ಉತ್ತಮ ಬಾಂಧವ್ಯ ರಾಜ್ಯ ಮಟ್ಟದ ಹಾಗೂ ಜಿಲ್ಲಾ ಮಟ್ಟದ ಸಹಕಾರಿ ಸಂಸ್ಥೆಗಳೊಡನೆ ಉತ್ತಮ ಬಾಂಧವ್ಯ ಸಹಕಾರ ಚಳುವಳಿಯ ಇತ್ತೀಚಿನ ದಿನಗಳಲ್ಲಿ ಸಾಧನೆಗಳು ಹಾಗೂ ಸವಾಲುಗಳು ಇವೆಲ್ಲವುಗಳ ಬಗ್ಗೆ ಅರಿತುಕೊಂಡು ಸೌಹಾರ್ದ ಸಹಕಾರಿ ಕ್ಷೇತ್ರದ ಮೇಲೆ ಆಗುವ ಪರಿಣಾಮಗಳ ಬಗ್ಗೆ ಚಿಂತನೆ ಮಾಡುವುದು, ಉತ್ತಮ ಸೌಹಾರ್ದ ಸಹಕಾರಿಗಳ ಕಾರ್ಯಚಟುವಟಿಕೆಗಳನ್ನು ಪರಿಚಯಿಸುವುದು, ಬಡ್ಡಿಯೇತರ ಆದಾಯಗಳನ್ನು ಹೆಚ್ಚಿಸುವಂತಹ ಹೆಚ್ಚಿನ ಚಟುವಟಿಕೆಗಳ ಬಗ್ಗೆ ಉತ್ತಮ ಪ್ರಚಾರ ನೀಡುವುದು,ಅನುಷ್ಠಾನಕ್ಕೆ ಕಾರ್ಯಯೋಜನೆ ರೂಪಿಸುವುದು ಹೀಗೆ ಒಟ್ಟಾರೆ ಸೌಹಾರ್ದ ಸಹಕಾರಿಯ ಅಸ್ತಿತ್ವವನ್ನು ಸಾರ್ವಜನಿಕರಲ್ಲಿ ಬಿಂಬಿಸುವ ಹಾಗೂ ಸಾರ್ವಜನಿಕರ ಬೆಂಬಲಹಾಗೂ ಪ್ರೋತ್ಸಾಹವನ್ನು ನಿರಂತರ ಪಡೆಯುವ ಅತ್ಯುತ್ತಮ ಕಾರ್ಯಕ್ರಮಗಳು ಇವಾಗಬೇಕು ಎಂದು ಸಂಯುಕ್ತ ಸಹಕಾರಿಯು ಅಪೇಕ್ಷಿಸುತ್ತದೆ.

ರಾಜ್ಯ ಸಂಯುಕ್ತ ಸಹಕಾರಿಯು ದಿನಾಂಕ **8–6–2010**ರಂದು ಬೆಳಗಾವಿಯಲ್ಲಿ ನಡೆದ ಸೌಹಾರ್ದ ಸಹಕಾರಿಗಳ ಸಮಾವೇಶದಲ್ಲಿ ಮಾನ್ಯ ಮುಖ್ಯ ಮಂತ್ರಿಗಳಿಂದ ಬಿಡುಗಡೆ ಮಾಡಿಸಿದ ದಶಮಾನೋತ್ಸವ ಕಾರ್ಯಕ್ರಮಗಳನ್ನು ತಾವೆಲ್ಲ ಒಂದು ಬಾರಿ ಅವಲೋಕಿಸಿದಾಗ ನೀವುಗಳು ನಿಮ್ಮ ಸಹಕಾರಿಯ ವ್ಯಾಪ್ತಿಯಲ್ಲಿ ಹಮ್ಮಿಕೊಳ್ಳಬಹುದಾದ ಕಾರ್ಯಕ್ರಮಗಳ ಬಗ್ಗೆ ಒಂದು ರೀತಿಯ ಕಲ್ಪನೆ ಬರುತ್ತದೆ. ನಂತರ ಹೇಗೆ ಆಚರಿಸಬೇಕು ಎಂಬುದರ ಬಗ್ಗೆ ತೀರ್ಮಾನಿಸಬಹುದಾಗಿದೆ. ವಿಶೇಷವಾಗಿ ನಿರಂತರ ತರಬೇತಿ ಅಧ್ಯಯನ ಕಾರ್ಯಕ್ರಮಗಳು, ಪ್ರವಾಸ ಕಾರ್ಯಕ್ರಮಗಳು, ಉತ್ತಮ ಸಹಕಾರಿ ಕಾರ್ಯಕರ್ತರುಗಳನ್ನು ಗುರುತಿಸಿ ಸನ್ಮಾನಿಸುವುದು, ಉತ್ತಮ ಅಧಿಕಾರಿಗಳನ್ನು ಗುರುತಿಸಿ ಸನ್ಮಾನಿಸಿ ಪ್ರೋತ್ಸಾಹಿಸುವುದು, ಸಹಕಾರಿಯಲ್ಲಿ ಗ್ರಂಥಾಲಯ ವ್ಯವಸ್ಥೆಯ ಏರ್ಪಾಡು, ಸಣ್ಣ ಸಣ್ಣ ಪುಸ್ತಿಕೆಗಳನ್ನು ಕರಪತ್ರಗಳನ್ನು ಭಿತ್ತಿಪತ್ರಗಳನ್ನು ಮುದ್ರಿಸಿ ವಿತರಿಸುವುದು, ಪತ್ರಿಕಾಮಾಧ್ಯಮದವರೊಂದಿಗೆ ನಿರಂತರ ಉತ್ತಮ ಬಾಂಧವ್ಯವಿರಿಸಿಕೊಳ್ಳುವುದು, ಗ್ರಾಮೀಣ ಹಾಗೂ ದೇಶೀಯ ಕ್ರೀಡೆಗಳನ್ನು ಏರ್ಪಡಿಸಿ ಪ್ರೋತ್ಸಾಹಿಸುವುದು, ಸಹಕಾರ ಚಳುವಳಿಯ ಬಗ್ಗೆ ಯುವಕರಲ್ಲಿ ಆಸಕ್ತಿ ಮೂಡಿಸಲು ಪ್ರಬಂಧ ಸ್ಪರ್ಧೆಹಾಗೂ ಚರ್ಚಾ ಸ್ಪರ್ಧೆಗಳನ್ನು ಶಾಲಾ ಕಾಲೇಜುಗಳ ಹಂತದಲ್ಲಿ ಏರ್ಪಡಿಸುವುದು, ಹೊಸ ಹೊಸ ಸೌಹಾರ್ದ ಸಹಕಾರಿಗಳನ್ನು ಪ್ರಾರಂಭಿಸುವಂತೆ ಪ್ರೇರೇಪಿಸುವುದು, ಹೀಗೆ ಹತ್ತು ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಗೆ ಪೂರಕವಾಗುವಂತಹ ಕಾರ್ಯಕ್ರಮಗಳನ್ನು ಹಾಕಿಕೊಂಡು ಸೌಹಾರ್ದ ಸಹಕಾರಿ ಕ್ಷೇತ್ರದ ಅಸ್ತಿತ್ವವನ್ನು ಸಾರ್ವಜನಿಕರ ಹಾಗೂ ಸೌಹಾರ್ದ ಸಹಕಾರಿಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ ಎಂಬುದನ್ನು ಸರಕಾರದ ಗಮನ ಸೆಳೆಯುವಲ್ಲಿ ಯಶಸ್ವಿಯಾಗಬೇಕೆಂಬುದು ಸಂಯುಕ್ತ ಸಹಕಾರಿಯ ಅಪೇಕ್ಷೆಯಾಗಿದೆ. ಈ ನಿಟ್ಟಿನಲ್ಲಿ ತಾವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತೀರೆಂದು ಆಶಿಸುತ್ತೇನೆ. ತಾವು ರೂಪಿಸಿಕೊಂಡಿರುವ ಕಾರ್ಯಕ್ರಮಗಳ ಬಗ್ಗೆ ಸಂಯುಕ್ತ ಸಹಕಾರಿಗೆ ತಿಳಿಸಿ. ಮಾರ್ಗದರ್ಶನ ನೀಡಲು ಸಂಯುಕ್ತ ಸಹಕಾರಿಯು ಸದಾ ಸಿದ್ಧವಿದೆ.. ತಾವು ಜರುಗಿಸುವ ದಶಮಾನೋತ್ಸವ ಕಾರ್ಯಕ್ರಮಗಳು ಯಶಸ್ವಿಯಾಗಲಿ ಎಂದು ಹಾರೈಸುತ್ತೇನೆ.

– ಎಸ್.ಆರ್.ಸತೀಶಚಂದ್ರ

**ಸೌಹಾರ್ದ ಸಹಕಾರಿಗಳ ಮಾಹಿತಿಗಾಗಿ ಸಹಕಾರಿಯ ಸಂಪರ್ಕ ದೂರವಾಣಿಗಳು**

| | | |
|---|---|---|
| ಅಧ್ಯಕ್ಷ | ಶ್ರೀ ಎಸ್. ಆರ್. ಸತೀಶಚಂದ್ರ | 9448696108 |
| ಉಪಾಧ್ಯಕ್ಷ | ಶ್ರೀ ಗುರುನಾಥ ಜ್ಯಾಂತಿಕರ | 9448270104 |
| ವ್ಯವಸ್ಥಾಪಕ ನಿರ್ದೇಶಕ | ಶ್ರೀ ಶರಣಗೌಡ ಪಾಟೀಲ | 9740401685 |
| ಉಪ ಪ್ರಧಾನ ವ್ಯವಸ್ಥಾಪಕ | ಶ್ರೀ ನಾರಾಯಣ ಹೆಗಡೆ | 9480579882 |
| ಉಪ ಪ್ರಧಾನ ವ್ಯವಸ್ಥಾಪಕ | ಶ್ರೀ ವೈ. ಕುಮಾರ | 9845893455 |
| ತರಬೇತಿ ಅಧಿಕಾರಿ | ಶ್ರೀ ವಿ.ಜಿ. ಕಾರಕೂನ | 9482734077 |
| ಬೆಳಗಾವಿ ವಿಭಾಗಾಧಿಕಾರಿ | ಶ್ರೀ ಜೋಷ್ಣನವರ್ | 9916367887 |

ಬೆಳಗಾವಿ ವಿಭಾಗೀಯ ಕಛೇರಿಯ ದೂರವಾಣಿ 0831–240551

## ಕ್ಯಾಂಪ್ಕೊ ಅಧ್ಯಕ್ಷರಾಗಿ ಶ್ರೀ ಕೊಂಕೋಡಿ ಪದ್ಮನಾಭ



ಶ್ರೀ ಕೊಂಕೋಡಿ ಪದ್ಮನಾಭರವರು ಪ್ರತಿಷ್ಠಿತ ಕ್ಯಾಂಪ್ಕೊ ಸಹಕಾರಿ ಸಂಸ್ಥೆಯ ಅಧ್ಯಕ್ಷರಾಗಿ ಹಾಗೂ ಶ್ರೀ ಸತೀಶ್ ಚಂದ್ರ ಭಂಡಾರಿರವರು ಉಪಾಧ್ಯಕ್ಷರಾಗಿ ಅವಿರೋಧವಾಗಿ ಮುಂದಿನ 5 ವರ್ಷಗಳ ಅವಧಿಗೆ ಆಯ್ಕೆಯಾಗಿದ್ದಾರೆ.

# ಬೆಳಗಾವಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅವಲೋಕನಾ ಸಭೆಗಳು-ಉತ್ತಮ ಪ್ರತಿಕ್ರಿಯೆ



ದಿನಾಂಕ 31-8-2010 ರಂದು ಬೆಳಗ್ಗೆ ಬೆಳಗಾವಿ ಹಾಗೂ ಖಾನಾಪುರ ಮಧ್ಯಾಹ್ನ 2-30 ಕ್ಕೆ ಹುಕ್ಕೇರಿ ದಿನಾಂಕ 1-9-2010 ರಂದು ಬೆಳಗ್ಗೆ ಅಥಣಿ ಮತ್ತು ಚಿಕ್ಕೋಡಿ ಮಧ್ಯಾಹ್ನ 2-30 ಕ್ಕೆ ಗೋಕಾಕ,ಸವದತ್ತಿ,ರಾಯಬಾಗ,ಬೈಲಹೊಂಗಲ್, ರಾಮದುರ್ಗ ತಾಲ್ಲೂಕುಗಳ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಸಭೆಗಳು ಸಂಯುಕ್ತ ಸಹಕಾರಿಯ ಅಧ್ಯಕ್ಷ ಎಸ್. ಆರ್.ಸತೀಶಚಂದ್ರ ಉಪಾಧ್ಯಕ್ಷ ಶ್ರೀ ಗುರುನಾಥ ಜ್ಯಾಂತಿಕರ ನಿರ್ದೇಶಕರುಗಳಾದ ಶ್ರೀ ರಾವಸಾಹೇಬ್.ಪಾಟೀಲ, ಶ್ರೀ ಶ್ರೀಕಾಂತ ಹತನೂರೆ, ಭಾಸ್ಕರ ಹೆಗಡೆ ಕಾಗೇರಿ,ಶ್ರೀ ಎಮ್.ಬಿ.ಕಲಾಲ,ಶ್ರೀ ಆರ್.ಎನ್.ದೇಶಪಾಂಡೆ, ಶ್ರೀ ಸಾಗರ ಬಿವಾಜರವರುಗಳ ಉಪಸ್ಥಿತಿಯಲ್ಲಿ ನಡೆಸಲಾಯಿತು..

ದಿನಾಂಕ 31-8-2010 ರಂದು ನಡೆದ ಕಾರ್ಯಕ್ರಮವನ್ನು ಹಿರಿಯ ಸಹಕಾರಿ ಹಾಗೂ ಸಂಯುಕ್ತ ಸಹಕಾರಿಯ ನಿರ್ದೇಶಕ ಶ್ರೀ ರಾವಸಾಹೇಬ ಪಾಟೀಲ್‌ರವರು ದೀಪ ಬೆಳಗಿಸಿ ಉದ್ಘಾಟಿಸಿ ಈ ರೀತಿಯ ಅವಲೋಕನಾ ಸಭೆಗಳು ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಯ ದೃಷ್ಟಿಯಿಂದ ಪ್ರತಿ 3 ತಿಂಗಳಿಗೊಮ್ಮೆಯಾದರೂ ನಡೆಯಬೇಕು. ಮತ್ತು ಜಿಲ್ಲೆಯ ಸೌಹಾರ್ದ ಸಹಕಾರಿಗಳು ತಪ್ಪದೆ ಭಾಗ ವಹಿಸುವಂತಾಗಬೇಕು. ಭಾಗವಹಿಸದೆ ಇರುವ ಸೌಹಾರ್ದ ಸಹಕಾರಿಗಳ ಮೇಲೆ ಶಿಸ್ತು ಕ್ರಮ ಜರು ಗಿಸುವುದು ಅವಶ್ಯಕ ಎಂದು ತಿಳಿಸಿದರು. ಎರಡನೇಯ ದಿನದ ಕಾರ್ಯಕ್ರಮವನ್ನು ಸಂಯುಕ್ತ ಸಹಕಾರಿಯ ನಿರ್ದೇಶಕ ಶ್ರೀ ಆರ್.ಎನ್.ದೇಶಪಾಂಡೆಯವರು ದೀಪ ಬೆಳಗಿಸಿ ಉದ್ಘಾಟಿಸಿದರು.

ಪ್ರಾಸ್ತಾವಿಕ ಭಾಷಣ ಮಾಡಿದ ಸಂಯುಕ್ತ ಸಹ ಕಾರಿಯ ಉಪಾಧ್ಯಕ್ಷ ಶ್ರೀ ಗುರುನಾಥ ಜ್ಯಾಂತಿಕರರವರು ರಾಜ್ಯದಲ್ಲಿ ಸೌಹಾರ್ದ ಸಹಕಾರಿಗಳ ಸಂಖ್ಯೆಯ ಬೆಳವಣಿಗೆಯ ಜೊತೆಗೆ ಗುಣಾತ್ಮಕ ಬೆಳವಣಿಗೆಯೂ ಅಗತ್ಯವಾಗುತ್ತದೆ.

11ನೇ ಪುಟಕ್ಕೆ...





ಬೆಳಗಾವಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅವಲೋಕನ ಸಭೆಯ ಎರಡನೇ ದಿನದ ಕಾರ್ಯಕ್ರಮದ ಉದ್ಘಾಟನೆ ಮತ್ತು ಭಾಗವಹಿಸಿದ್ದ ಪ್ರತಿನಿಧಿಗಳು

# ಸೌಹಾರ್ದ ಸಹಕಾರಿಗಳಿಗೆ ಇ-ಸ್ಟಾಂಪಿಂಗ ಜೊತೆಗೆ ಹೆಚ್ಚಿನ ಸೇವಾ ಸೌಲಭ್ಯಗಳನ್ನು ವಹಿಸಲು ಸರಕಾರದಲ್ಲಿ ಚಿಂತನೆ - ಕೆ.ಎಸ್. ಪ್ರಭಾಕರ

ಸರಕಾರವು ಕಂದಾಯ ಇಲಾಖೆಯ ಮೂಲಕ ಒದಗಿಸುವ ಹಲವು ಸೇವಾ ವ್ಯವಹಾರಗಳನ್ನು ಸೌಹಾರ್ದ ಸಹಕಾರಿಗಳಿಗೆ ವಹಿಸಿಕೊಡುವ ಬಗ್ಗೆ ಚಿಂತನೆ ನಡೆಸುತ್ತಿದೆ. ಈ ಎಲ್ಲ ಸೌಲಭ್ಯಗಳನ್ನು ಜನರಿಗೆ ಸಮರ್ಪಕವಾಗಿ ಕಾರ್ಯನಿರ್ವಹಿಸಲು ಸೌಹಾರ್ದ ಸಹಕಾರಿಗಳು ಸಿದ್ಧರಾಗಬೇಕಿದೆ.



**ಸೌಹಾರ್ದ ಸಹಕಾರಿಗಳಲ್ಲಿ ಬಡ್ಡಿಯೇತರ ಆದಾಯ ತರಬೇತಿ ಕಾರ್ಯಕ್ರಮ ಉದ್ಘಾಟನೆ. ಚಿತ್ರದಲ್ಲಿ ಕಂದಾಯ ಇಲಾಖೆಯ ಕಾರ್ಯದರ್ಶಿ ಶ್ರೀ ಕೆ. ಎಸ್. ಪ್ರಭಾಕರ, ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಎಸ್. ಆರ್. ಸತೀಶ್‌ಚಂದ್ರ, ಉಪಾಧ್ಯಕ್ಷ ಶ್ರೀ ಗುರುನಾಥ ಜ್ಯಾಂತೀಕರ, ನಿರ್ದೇಶಕ ಶ್ರೀ ಶ್ರೀನಿವಾಸಮೂರ್ತಿ ಅವರುಗಳಿದ್ದಾರೆ.**

ಸೌಹಾರ್ದ ಸಹಕಾರಿಗಳ ಇ-ಸ್ಟಾಂಪಿಂಗ ವ್ಯವಹಾರಗಳ ಪರಿಶೀಲನಾ ಸಭೆ ಹಾಗೂ ಬಡ್ಡಿಯೇತರ ಆದಾಯಗಳ ಮಾಹಿತಿ ಸಭೆಯಲ್ಲಿ ಕಂದಾಯ ಇಲಾಖೆ ಕಾರ್ಯದರ್ಶಿ ಶ್ರೀ ಕೆ.ಎಸ್.ಪ್ರಭಾಕರ ತಿಳಿಸಿದರು. ಸಂಯುಕ್ತ ಸಹಕಾರಿಯು ಏರ್ಪಡಿಸಿದ್ದ ಈ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಶ್ರೀಯುತರು ರಾಜ್ಯದಲ್ಲಿ ಸೌಹಾರ್ದ ಸಹಕಾರಿಗಳು ಇ-ಸ್ಟಾಂಪಿಂಗ ವ್ಯವಹಾರವನ್ನು ತೃಪ್ತಿಕರವಾಗಿ ನಿರ್ವಹಿಸುತ್ತಿವೆ. ಈ ಹಿನ್ನೆಲೆಯಲ್ಲಿ ಸಾರ್ವಜನಿಕರಿಗೆ ಸರಕಾರವು ಕಂದಾಯ ಇಲಾಖೆಯ ಮೂಲಕ ಒದಗಿಸುವ ಹಲವು ಸೇವಾ ವ್ಯವಹಾರಗಳನ್ನು ಸೌಹಾರ್ದ ಸಹಕಾರಿಗಳಿಗೆ ವಹಿಸಿಕೊಡುವ ಬಗ್ಗೆ ಚಿಂತನೆ ನಡೆಸುತ್ತಿದೆ. ಈ ಎಲ್ಲ ಸೌಲಭ್ಯಗಳನ್ನು ಜನರಿಗೆ ಸಮರ್ಪಕವಾಗಿ ಕಾರ್ಯನಿರ್ವಹಿಸಲು ಸೌಹಾರ್ದ ಸಹಕಾರಿಗಳು ಸಿದ್ಧರಾಗಬೇಕಿದೆ. ಈ ವ್ಯವಹಾರ ಮಾಡುವುದರಿಂದ ಬಡ್ಡಿಯೇತರ ಆದಾಯಗಳನ್ನು ಹೆಚ್ಚಿಸಿಕೊಳ್ಳಲು ಅವಕಾಶ ಹೆಚ್ಚುತ್ತದೆ ಎಂದರು.

ಸಮಾರಂಭದ ಅಧ್ಯಕ್ಷತೆಯನ್ನು ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಎಸ್.ಆರ್. ಸತೀಶಚಂದ್ರರವರು ವಹಿಸಿದ್ದರು. ಉಪಾಧ್ಯಕ್ಷ ಶ್ರೀ ಗುರುನಾಥ ಜ್ಯಾಂತಿಕರ ಪ್ರಾಸ್ತಾವಿಕ ಭಾಷಣ ಮಾಡಿದರು ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ ಪಾಟೀಲ್ರವರು ಸ್ವಾಗತ ಕೋರಿದರು. ಉಪಪ್ರಧಾನ ವ್ಯವಸ್ಥಾಪಕ ಶ್ರೀ ವೈ.ಕುಮಾರ್ ವಂದನಾರ್ಪಣೆ ಸಲ್ಲಿಸಿದರು.

ಕಾರ್ಯಕ್ರಮದಲ್ಲಿ ಇ-ಸ್ಟಾಂಪಿಂಗ ವಿಷಯವಾಗಿ ಸ್ಟಾಕ್ ಹೋಲ್ಡಿಂಗ ಕಂಪನಿಯ ಉಪಾಧ್ಯಕ್ಷ ಶ್ರೀ ಶ್ರೀಕಾಂತ ಪಟವರ್ಧನ ಅಧಿಕಾರಿ ಶ್ರೀ ರಾಘವೇಂದ್ರ ರವರು ಸೌಹಾರ್ದ ಸಹಕಾರಿಗಳ ಉತ್ತಮವಾಗಿ ಸೇವೆ ಸಲ್ಲಿಸುತ್ತಿರುವ ಬಗ್ಗೆ ಶ್ಲಾಘಿಸಿದರು.

ರಾಷ್ಟ್ರದಲ್ಲಿಯೆ ಇಷ್ಟೊಂದು ಕಡಿಮೆ ಅವಧಿಯಲ್ಲಿ ಅತಿ ಹೆಚ್ಚು ಕೇಂದ್ರಗಳನ್ನು ಈ ಸೌಹಾರ್ದ ಕ್ಷೇತ್ರ ಪ್ರಾರಂಭಿಸಿರುವುದು ಅಭಿನಂದನಾರ್ಹ ಎಂದು ತಿಳಿಸುತ್ತ ಇ-ಸ್ಟಾಂಪಿಂಗ ವ್ಯವಹಾರದ ಬಗ್ಗೆ ಈ ವ್ಯವಹಾರದಲ್ಲಿ ಹೆಚ್ಚಿನ ಶಿಸ್ತನ್ನು ಅಳವಡಿಸುವ ಮೂಲಕ ಉತ್ತಮ ರೀತಿಯಲ್ಲಿ ಸೇವೆಯನ್ನು ಒದಗಿಸಬಹುದಾಗಿದೆಯೆಂದು ತಿಳಿಸಿದರು.

ಸಹಕಾರಿಗಳ ಪ್ರಶ್ನೆಗಳಿಗೆ, ಸಮಸ್ಯೆಗಳಿಗೆ, ಸಂದೇಹಗಳಿಗೆ ಸ್ಪಂದಿಸಿದರುಕಾರ್ಯಕ್ರಮದಲ್ಲಿ ಒನ್ ಸ್ಟಾಪಶಾಪ ಕಂಪನಿಯ ಅಧಿಕಾರಿಗಳು, ಶುರ ವೆವ್ವ ಕಂಪನಿಯ ಅಧಿಕಾರಿಗಳು, ಸೆಲ್ಕೊ ಸೋಲಾರ ಲೈಟ್ ಪ್ರಾಯವೇಟ್ ಲಿಮಿಟೆಡ್ ಅಧಿಕಾರಿಗಳು ವೆಸ್ಟರ್ನ ಯೂನಿಯನ್ ಮನಿ ಟ್ರಾನ್ಸಫರ್ ಅಧಿಕಾರಿಗಳು ಇಫ್ಕೊ ಟೋಕಿಯೋ ಜನರಲ್ ಇನ್ಸುರೆನ್ಸ ಕಂಪನಿಯ ಅಧಿಕಾರಿಗಳು ಭಾಗವಹಿಸಿ ಸೌಹಾರ್ದ ಸಹಕಾರಿಗಳು ವಿವಿಧ ಕಾರ್ಯ ಚಟುವಟಿಕೆಗಳ ಮೂಲಕ ಬಡ್ಡಿಯೇತರ ಆದಾಯಗಳನ್ನು ಹೆಚ್ಚಿಸಿಕೊಳ್ಳುವ ಬಗ್ಗೆ ತಮ್ಮ ಕಂಪನಿಯು ಹೇಗೆ ನೆರವಾಗಬಲ್ಲದು ಎಂಬ ಬಗ್ಗೆ ವಿವರಣೆ ನೀಡಿದರು.



ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಪ್ರತಿನಿಧಿಗಳು

# ಶ್ರೀ ಭ್ರಮರಾಂಬ ಪತ್ತಿನ ಸೌಹಾರ್ದ ಸಹಕಾರಿ : ಯಶಸ್ವಿ ವಾರ್ಷಿಕ ಮಹಾಸಭೆ

ಶ್ರೀ ಭ್ರಮರಾಂಬ ಪತ್ತಿನ ಸೌಹಾರ್ದ ಸಹಕಾರಿಯ ಹತ್ತನೇ ವಾರ್ಷಿಕ ಮಹಾಸಭೆಯು ದಿನಾಂಕ: 21.08.2010ರಂದು ಸಹಕಾರಿಯ ಅಧ್ಯಕ್ಷರಾದ ಡಾ:ಶಿವಶರಣಪ್ಪ ಇಕ್ಲಿ ಯವರ ಅಧ್ಯಕ್ಷತೆಯಲ್ಲಿ ಜರುಗಿತು. 2009-10 ನೇ ಆರ್ಥಿಕ ವರ್ಷದ ಅಂತ್ಯಕ್ಕೆ ಸಹಕಾರಿಯು ಸದಸ್ಯರಿಂದ ರೂ.88.51 ಲಕ್ಷ ಶೇರು ಬಂಡವಾಳ, ರೂ.14.83 ಕೋಟಿ ಠೇವಣಿಗಳನ್ನು ಸಂಗ್ರಹಿಸಿದ್ದು, ಸದಸ್ಯರಿಗೆ ವಿವಿಧ ರೀತಿಯ ಸಾಲವಾಗಿ ರೂ.12.00 ಕೋಟಿ ನೀಡಿದೆ. ಸಹಕಾರಿಯು 3359 ಸದಸ್ಯರನ್ನು ಹೊಂದಿದ್ದು, ಸಹಕಾರಿಯ ದುಡಿಯುವ ಬಂಡವಾಳ ರೂ.16 ಕೋಟಿ ಇರುತ್ತದೆ. ಸಹಕಾರಿಯು ಈ ವರ್ಷ 40.35 ಲಕ್ಷ ಲಾಭ ಗಳಿಸಿದ್ದು, ಸದಸ್ಯರಿಗೆ ಪ್ರತಿ ವರ್ಷದಂತೆ ಈ ವರ್ಷ ಕೂಡ ಶೇ.15 ಲಾಭಾಂಶ ನೀಡಿದೆ.

ಸಹಕಾರಿಯು ಸದಸ್ಯರ ಆರ್ಥಿಕ ಅಭಿವೃದ್ಧಿಗೆ ಶ್ರಮಿಸುತ್ತಿದ್ದು, ಸದಸ್ಯರು ಮರಣ ಹೊಂದಿದರೆ ಸಹಕಾರಿಯ ವತಿಯಿಂದ ರೂ.10,000 ಗಳನ್ನು ಅವರ ಕುಟುಂಬದವರಿಗೆ ನೀಡುವ 'ಭ್ರಮರಾಂಬ ಜೀವನಿಧಿ' ಎಂಬ ನೂತನ ಯೋಜನೆಯನ್ನು ಸಹಕಾರಿಯು ಜಾರಿಗೆ ತಂದಿದೆ.

ಅದೇ ರೀತಿ ಸಹಕಾರಿಯು ಬಡ್ಡಿಯೇತರ ಆದಾಯ ಹೊಂದುವ ನಿಟ್ಟಿನಲ್ಲಿ "METLIFE INDIA INSURANCE CO. LTD" ವಿಮಾ ಕಂಪನಿ ಜೊತೆ ಹೊಂದಾಣಿಕೆ ಮಾಡಿಕೊಂಡಿದೆ.



ವಾರ್ಷಿಕ ಮಹಾಸಭೆಯಲ್ಲಿ ಸಹಕಾರಿಯ ಅಧ್ಯಕ್ಷರಾದ ಡಾ: ಶಿವಶರಣಪ್ಪ ಇಕ್ಲಿ ಸಭೆಯಲ್ಲಿ ಅಧ್ಯಕ್ಷತೆ ವಹಿಸಿದ್ದರೆ, ಶ್ರೀ ಚೊಕ್ಕ ಬಸವನಗೌಡ, ಉಪಾಧ್ಯಕ್ಷರು, Apex Bank & ಅಧ್ಯಕ್ಷರು, PLD Bank ಸಿರುಗುಪ್ಪ, ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ದಯಾನಂದ ಜೋಗಿನ್, ಶ್ರೀ ಶಿವಶಂಕರಗೌಡ, ಒ ಮುಖ್ಯ ಸಂಯೋಜಕರು, ಸಿರುಗುಪ್ಪ ಶಾಖೆ, ಶ್ರೀ ಶರಣಪ್ಪ.ಆ, ಶ್ರೀ K.R.ಶ್ರೀನಿವಾಸ್, Zonal Manager, Metlife India insurance co. ltd., ಸಹಕಾರಿಯ ಲೆಕ್ಕಪರಿಶೋಧಕರಾದ ಶ್ರೀ ನಾಗನಗೌಡ, ಸಿರುಗುಪ್ಪ ಹಾಗೂ ಸಹಕಾರಿಯ ಮುಖ್ಯಕಾರ್ಯನಿರ್ವಾಹಕರಾದ ಶ್ರೀ ವೀರೇಶ ಹಿರೇಮಠ ಅವರು ಉಪಸ್ಥಿತರಿದ್ದರು.

ಇದೇ ಸಂದರ್ಭದಲ್ಲಿ ಉತ್ತಮ ಗ್ರಾಹಕರಿಗೆ ಹಾಗೂ ಅತಿ ಹೆಚ್ಚು ಅಂಕ ಗಳಿಸಿದ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

## ಶ್ರೀ ರಾವಸಾಹೇಬ್ ಪಾಟೀಲರಿಗೆ ಅಭಿನಂದನೆ



ಹಿರಿಯ ಸಹಕಾರಿ ಕರ್ನಾಟಕ ರಾಜ್ಯ ಸರಕಾರದ ಸಹಕಾರಿ ರತ್ನ ಪ್ರಶಸ್ತಿ ಪುರಸ್ಕೃತರು, ಸಂಯುಕ್ತ ಸಹಕಾರಿಯ ನಿರ್ದೇಶಕ ಬೋರಗಾಂವ ಸೌಹಾರ್ದ ಸಹಕಾರಿಯ ಅಧ್ಯಕ್ಷ ಶ್ರೀ ರಾವಸಾಹೇಬ ಪಾಟೀಲ್‌ರವರು ದಕ್ಷಿಣ ಭಾರತ ಜೈನ ಮಹಾಸಭಾದ ಅಧ್ಯಕ್ಷರಾಗಿ ಆಯ್ಕೆಯಾಗಿರುವ ಸಂದರ್ಭದಲ್ಲಿ ಸೌಹಾರ್ದ ಸಹಕಾರಿಗಳ ಪರವಾಗಿ ಶ್ರೀಯುತರನ್ನು ಅಭಿನಂದಿಸಲಾಯಿತು.

# ವಿವಿಧ ಸೌಹಾರ್ದ ಸಹಕಾರಿಗಳಲ್ಲಿ



## ಶ್ರೀ ಕುಮಾರ ಕ್ರೆಡಿಟ್ ಸೌಹಾರ್ದ ಸಹಕಾರಿಯಲ್ಲಿ "ಇ-ಸ್ಟಾಂಪಿಂಗ" ಉದ್ಘಾಟನೆ

ದಿನಾಂಕ 16-7-2010 ರಂದು ಹೊನ್ನಾವರ ತಹಶೀಲದಾರ ಶ್ರೀಮತಿ ಗಾಯತ್ರಿ ನಾಯಕರವರು ಇ-ಸ್ಟಾಂಪಿಂಗ ಉದ್ಘಾಟಿಸಿದರು.

ಚಿತ್ರದಲ್ಲಿ ಸಂಯುಕ್ತ ಸಹಕಾರಿಯ ನಿರ್ದೇಶಕ ಶ್ರೀ ಭಾಸ್ಕರ ಹೆಗಡೆ ಕಾಗೇರಿಕೆ.ಡಿ.ಸಿ.ಸಿ.ಬ್ಯಾಂಕ ನಿರ್ದೇಶಕ ಶ್ರೀ ಶಿವಾನಂದ ಹೆಗಡೆ ಸಹಕಾರಿಯ ಅಧ್ಯಕ್ಷ ಶ್ರೀ ವೆಂಕಟರಮಣ ಹೆಗಡೆ ಮತ್ತು ಕವಲಕ್ಕಿ ನಿರ್ದೇಶಕ ಶ್ರೀ ಪಿ.ಎಸ್. ಭಟ್ ಹಾಗೂ ಸಹಕಾರಿಯ ನಿರ್ದೇಶಕ ಮಂಡಳಿಯವರು.

## ದಿ ಮುಳಗುಂದ ಅರ್ಬನ್ ಸೌಹಾರ್ದ ಸಹಕಾರಿ ಬ್ಯಾಂಕನಲ್ಲಿ "ಇ-ಸ್ಟಾಂಪಿಂಗ" ಪ್ರಾರಂಭ

ದಿ ಮುಳಗುಂದ ಅರ್ಬನ್ ಸೌಹಾರ್ದ ಸಹಕಾರಿ ಬ್ಯಾಂಕನಲ್ಲಿ ಇ-ಸ್ಟಾಂಪಿಂಗ ವ್ಯವಹಾರವನ್ನು ಬ್ಯಾಂಕಿನ ಚೇರಮೆನ್ ಶ್ರೀ ಸಿ.ಬಿ.ಬಟ್ಟಿಯವರು ಪ್ರಾರಂಭಿಸಿದರು. ಸಮಾರಂಭದಲ್ಲಿ ಸೌಹಾರ್ದಸಂಯುಕ್ತ ಸಹಕಾರಿಯ ನಿರ್ದೇಶಕ ಶ್ರೀ ಆರ್.ಎನ್.ದೇಶಪಾಂಡೆ, ಶ್ರೀ ಎಸ್. ಎಮ್.ನೀಲಗುಂದಶ್ರೀ ಪಿ.ವಿ ಹಳ್ಳಿ, ಶ್ರೀ ಎಮ್.ಡಿ.ಬಟ್ಟೂರ ಶ್ರೀ ಬಿ.ಕೆ.ಹರಪನಹಳ್ಳಿ, ಶ್ರೀ ಎಫ್.ವೈ.ಪಿರೆಮನಿ ಶ್ರೀ ಪಿ.ಎ.ವೆಂಕಟರಮಣ ಶ್ರೀ ಎಮ್.ಆರ್.ಬಂಗಾರಿ ಮುಂತಾದವರು ಉಪಸ್ಥಿತರಿದ್ದರು.





## ವರಲಕ್ಷ್ಮಿ ಕ್ರೆಡಿಟ್ ಸೌಹಾರ್ದ ಸಹಕಾರಿಯಲ್ಲಿ "ಇ-ಸ್ಟಾಂಪಿಂಗ" ಉದ್ಘಾಟನೆ

ವರಲಕ್ಷ್ಮಿ ಕ್ರೆಡಿಟ್ ಸೌಹಾರ್ದ ಸಹಕಾರಿಯಲ್ಲಿ ಇ-ಸ್ಟಾಂಪಿಂಗ ವಿಭಾಗವನ್ನು ಪೂಜ್ಯ ಶ್ರೀಮಾತಾ ಕಟ್ಟಡದಲ್ಲಿ ಹಿರಿಯ ಸಹಕಾರಿ ಧುರೀಣ ಶ್ರೀ ಆರ್.ಎಸ್. ಭಾಗವತರವರು ಉದ್ಘಾಟಿಸಿದರು. ಸಹಕಾರಿಯ ಅಧ್ಯಕ್ಷ ಶ್ರೀ ಜಿ.ಎಸ್.ಭಟ್ಟವರು ಅಧ್ಯಕ್ಷತೆ ವಹಿಸಿದ್ದರು. ಹಿರಿಯ ನ್ಯಾಯವಾದಿ ಶ್ರೀ ಎಚ್.ವಿ.ಹೆಗಡೆ, ಕಾನೂನು ಸಲಹೆಗಾರ ಶ್ರೀ ಪಿ.ಜಿ.ಕಮಟಿ ಶ್ರೀ ಡಿ.ಎಸ್.ಭಟ್ಟ ಭಾಗವಹಿಸಿದ್ದರು.

# "ಇ-ಸ್ಟಾಂಪಿಂಗ್" ಸೇವೆ ಆರಂಭ

## ಕೊಡಗು ವಿದ್ಯಾ ಇಲಾಖಾ ನೌಕರರ ಪತ್ತಿನ ಸಹಕಾರಿಯಲ್ಲಿ "ಇ-ಸ್ಟಾಂಪಿಂಗ ಉದ್ಘಾಟನೆ"

ಕೊಡಗು ವಿದ್ಯಾ ಇಲಾಖಾ ನೌಕರರ ಪತ್ತಿನ ಸೌಹಾರ್ದ ಸಹಕಾರಿಯಲ್ಲಿ ಇ- ಸ್ಟಾಂಪಿಂಗ ವ್ಯವಹಾರಕ್ಕೆ ಹಿರಿಯ ಸಹಕಾರಿ ಹಾಗೂ ಮಾಜಿ ಮಂತ್ರಿ ಶ್ರೀ ಎಮ್.ಸಿ.ನಾಣಯ್ಯನವರಿಂದ ಚಾಲನೆ. ಸಮಾರಂಭದಲ್ಲಿ ಸಂಯುಕ್ತ ಸಹಕಾರಿಯ ಅಧ್ಯಕ್ಷ ಶ್ರೀ ಎಸ್.ಆರ್.ಸತೀಶಚಂದ್ರ ಹಾಗೂ ಸಹಕಾರಿಯ ನಿರ್ದೇಶಕ ಮಂಡಳಿಯವರು ಹಾಗೂ ಅಧಿಕಾರಿ ವರ್ಗದವರು ಉಪಸ್ಥಿತರಿದ್ದರು.





## ಯಡಗೆರೆ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್‌ನಲ್ಲಿ "ಇ-ಸ್ಟಾಂಪಿಂಗ" ವ್ಯವಹಾರ ಕೊಪ್ಪದಲ್ಲಿ ಪ್ರಾರಂಭ

ಹಿರಿಯ ಸಹಕಾರಿ ಶ್ರೀ ಕೆ. ಎಸ್. ಶಾಂತಾರಾಮ ಅಧ್ಯಕ್ಷರು ಟಿ.ಎ.ಪಿ.ಸಿ.ಎಮ್. ಎಸ್.ಕೊಪ್ಪಯವರು ಉದ್ಘಾಟಿಸಿದರು. ಸಮಾರಂಭದಲ್ಲಿ ಉಪ ನೊಂದಣಾಧಿಕಾರಿ ಶ್ರೀ ಶೇಷಪ್ಪ ಶೆಟ್ಟಿ ಸಹಕಾರಿಯ ಅಧ್ಯಕ್ಷರಾದ ಶ್ರೀ ವೈ.ಎಸ್. ಸುಬ್ರಮಣ್ಯ ಹಾಗೂ ಸಹಕಾರಿ ನಿರ್ದೇಶಕರು ಸಿಬ್ಬಂದಿಯವರು ಉಪಸ್ಥಿತರಿದ್ದರು.

## ಬ್ಯಾಡಗಿಯ ಶ್ರೀ ಸಿದ್ಧೇಶ್ವರ ವಿವಿದ್ದೊದ್ದೇಶ ಸೌಹಾರ್ದ ಸಹಕಾರಿಯಲ್ಲಿ "ಇ-ಸ್ಟಾಂಪಿಂಗ" ವ್ಯವಹಾರ ಪ್ರಾರಂಭ

ಶ್ರೀ ಸಿದ್ಧೇಶ್ವರ ವಿವಿದ್ದೋದ್ದೇಶ ಸೌಹಾರ್ದ ಸಹಕಾರಿಯಲ್ಲಿ 13-08-2010ರಂದು ಬ್ಯಾಡಗಿಯ ಶಾಸಕರಾದ ಶ್ರೀ ಸುರೇಶಗೌಡ ಪಾಟೀಲ ರವರು "ಇ-ಸ್ಟಾಂಪಿಂಗ್" ಉದ್ಘಾಟಿಸಿದರು.



# ಸೌಹಾರ್ದ ಸಹಕಾರಿ ಸಮಾಚಾರಗಳು



## ಮಯೂರ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ನ ಶಿವಮೊಗ್ಗ ಶಾಖೆಯ ವಾರ್ಷಿಕೋತ್ಸವ

ದಿನಾಂಕ 21-8-2010 ರಂದು ಮಯೂರ ಸೌಹಾರ್ದ ಸಹಕಾರಿಯ ಶಿವಮೊಗ್ಗ ಶಾಖೆಯ ವಾರ್ಷಿಕೋತ್ಸವದ ಅಂಗವಾಗಿ ಮಧ್ಯಮ ವರ್ಗದ ಕುಟುಂಬಗಳಲ್ಲಿ ಹಣಕಾಸಿನ ನಿರ್ವಹಣೆ ಬಗ್ಗೆ ಸಂವಾದ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ಲೆಕ್ಕ ಪರಿಶೋಧಕರಾದ ಶ್ರೀ ಬಿ.ವಿ.ರವೀಂದ್ರನಾಥ್ ರವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಿಕಾಸ ವಿದ್ಯಾ ಸಮಿತಿಯ ಕಾರ್ಯದರ್ಶಿ ಶ್ರೀ ಎ.ಜೆ.ರಾಮಚಂದ್ರರವರು ವಹಿಸಿದ್ದರು.

## ಮೃತ ಸಹಕಾರಿಯ ಪತ್ನಿಗೆ ಬಿರ್ಲಾ ಸನ್ ಲೈಫ್ ಇನ್ಸುರೆನ್ಸ್ ಕಂಪನಿಯಿಂದ ಪರಿಹಾರ

ಗುಲ್ಬರ್ಗಾದ ಸಿದ್ಧಿವಿನಾಯಕ ಸೌಹಾರ್ದ ಪತ್ತಿನ ಸಹಕಾರಿಯಲ್ಲಿ ರೂ. 5000/- ಸಾಲ ಪಡೆದ ಶ್ರೀ ಮಹಮ್ಮದ್ ನವಾಜರವರು ಅಕಾಲಿಕವಾಗಿ ಮೃತರಾದರು. ಅವರು ಸಿದ್ಧಿವಿನಾಯಕ ಸೌಹಾರ್ದ ಸಹಕಾರಿಯಲ್ಲಿ ಬಿರ್ಲಾ ಸನ್ ಲೈಫ್ಇನ್ಸುರೆನ್ಸ್ ಕಂಪನಿಯಿಂದ ಇನ್ಸುರೆನ್ಸ ಮಾಡಿಸಿದ್ದರು. ಹೀಗಾಗಿ ಮೃತರ ಪತ್ನಿ ಶ್ರೀಮತಿ ಸಯೀದಾ ಫಾತಿಮಾರವರಿಗೆ ಬಿರ್ಲಾ ಸನ್ ಲೈಫ್ಇನ್ಸುರೆನ್ಸ್‌ನಿಂದ ರೂ. 5000/-ಗಳನ್ನು ಸಹಕಾರಿಯ ಅಧ್ಯಕ್ಷ ಶ್ರೀ ಸಂಜೀವ ಮಹಾಜನ ವಿತರಿಸಿದರು. ಉಪಾಧ್ಯಕ್ಷ ಶ್ರೀ ಸಿದ್ಧಾಮಪ್ಪ ಪಾಟೀಲ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀ ಮಹೇಶ ಪಾಟೀಲ ಮುಂತಾದವರು ಉಪಸ್ಥಿತರಿದ್ದರು.





## ಕೆನ್ನಮೆಟಲ್ ಇಂಡಿಯಾ ಎಂಪ್ಲಾಯೀಸ್ ಸೌಹಾರ್ದ ಕ್ರೆಡಿಟ್ ಕೊ-ಆಪರೇಟಿವ್ 12ನೇ ಸರ್ವ ಸದಸ್ಯರ ಸಭೆ

ಕೆನ್ನಮೆಟಲ್ ಇಂಡಿಯಾ ಎಂಪ್ಲಾಯೀಸ್ ಸೌಹಾರ್ದ ಕ್ರೆಡಿಟ್ ಕೊ-ಆಪರೇಟಿವ್ 12ನೇ ಸರ್ವ ಸದಸ್ಯರ ಸಭೆಯು 22-08-2010 ರಂದು ಸಹಕಾರಿಯ ಗೌರವ ಅಧ್ಯಕ್ಷರಾದ ಶ್ರೀ ಹೆಚ್.ನರಸಿಂಹಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಹಕಾರಿಯಲ್ಲಿ 693 ಸದಸ್ಯರು, ರೂ. 26,29,600 ಶೇರು ಬಂಡವಾಳವಿದ್ದು ರೂ. 1,89,73,400 ರೂಗಳ ಠೇವಣಿ ರೂ. 1,94,55,000 ಸಾಲಗಳನ್ನು ನೀಡಲಾಗಿದೆ. ಪ್ರಸಕ್ತ ಸಾಲಿನಲ್ಲಿ ರೂ. 5,95,025 ಲಾಭಗಳಿಸಿದೆಯೆಂದು ಸಹಕಾರಿಯ ಪ್ರಕಟಣೆಯಲ್ಲಿ ತಿಳಿಸಲಾಗಿದೆ. ಇದೇ ಸಂದರ್ಭದಲ್ಲಿ ಸಹಕಾರಿಯ ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

## ಶ್ರೀ ಭುವನೇಶ್ವರಿ ಪತ್ತಿನ ಸೌಹಾರ್ದ ಸಹಕಾರಿ ಸರ್ವ ಸದಸ್ಯರ ಸಭೆ

ಶ್ರೀ ಭುವನೇಶ್ವರಿ ಪತ್ತಿನ ಸೌಹಾರ್ದ ಸಹಕಾರಿಯಲ್ಲಿ ರೂ. 20,87,433.91 ಲಾಭ. ಸದಸ್ಯರಿಗೆ 14% ಡಿವಿಡೆಂಡ ಶ್ರೀ ಭುವನೇಶ್ವರಿ ಪತ್ತಿನ ಸೌಹಾರ್ದ ಸಹಕಾರಿಯ ಸರ್ವ ಸದಸ್ಯರ ಸಭೆಯು ದಿನಾಂಕ 28-8-2010 ರಂದು ಸಹಕಾರಿಯ ಅಧ್ಯಕ್ಷರಾದ ಶ್ರೀ ಮುಷ್ಠಿ ವಿರುಪಾಕ್ಷಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು. ಇದೇ ಸಂದರ್ಭದಲ್ಲಿ ಸಹಕಾರಿಯಲ್ಲಿ ಉತ್ತಮ ವಹಿವಾಟು ಮಾಡಿದ 5 ಜನ ಗ್ರಾಹಕರನ್ನು ಗುರುತಿಸಿ ಸನ್ಮಾನಿಸಲಾಯಿತು.



# ಕಚೇರಿ ಆಡಳಿತ ಮತ್ತು ಕಡತ ನಿರ್ವಹಣೆ

ಒಂದು ಸಂಸ್ಥೆಯು ಚೆನ್ನಾಗಿ ಕಾರ್ಯನಿರ್ವಹಿಸುತ್ತದೆ ಎಂದು ವ್ಯಾಖ್ಯಾನಿಸುವಾಗ ಅನೇಕ ವಿಷಯಗಳ ಬಗ್ಗೆ ಗಮನ ಹರಿಸಬೇಕಾಗುತ್ತದೆ. ಸಂಸ್ಥೆಯ ಆಡಳಿತ ವ್ಯವಸ್ಥೆ, ಹಣಕಾಸಿನ ವ್ಯವಸ್ಥೆ, ಸಾರ್ವಜನಿಕ ಸಂಪರ್ಕವ್ಯವಸ್ಥೆ, ಸಂಸ್ಥೆಯ ವ್ಯಾಪಾರ ವ್ಯವಹಾರಗಳ ಬಗ್ಗೆ ಜನರ ಅಭಿಪ್ರಾಯಗಳು, ನೌಕರರ ವ್ಯವಸ್ಥೆ ಇತ್ಯಾದಿ. ಇವೆಲ್ಲವುಗಳನ್ನು ಅಚ್ಚುಕಟ್ಟಾಗಿ ಬಿಂಬಿಸುವುದು ಆ ಸಂಸ್ಥೆಯ ಕಚೇರಿಯ ಆಡಳಿತ ವ್ಯವಸ್ಥೆ ಅಲ್ಲಿನ ಕಡತಗಳ ನಿರ್ವಹಣೆ. ಇವುಗಳು ವೈಜ್ಞಾನಿಕವಾಗಿ ಅಚ್ಚುಕಟ್ಟಾಗಿ ವ್ಯವಸ್ಥಿತವಾಗಿ ನಿರ್ವಹಣೆಯಾದಲ್ಲಿ ಕಚೇರಿಯಲ್ಲಿ ಉತ್ತಮ ವಾತಾವರಣ ಕೆಲಸದಲ್ಲಿ ಆಸಕ್ತಿ ಹೆಚ್ಚುವುದರ ಜೊತೆಗೆ ಕೆಲಸಗಳು ಶೀಘ್ರವಾಗಿ ನಿಗದಿತ ಸಮಯದಲ್ಲಿ ನಡೆಯುತ್ತವೆ. ಸಮಯದ ಉತ್ತಮ ನಿರ್ವಹಣೆಯಾಗುತ್ತದೆ. ಆದ್ದರಿಂದ ಕಚೇರಿ ಆಡಳಿತ ಮತ್ತು ಕಡತಗಳ ನಿರ್ವಹಣೆಗೆ ಹೆಚ್ಚು ಮಹತ್ವ ಕೊಡಬೇಕಾಗುತ್ತದೆ.

ಭಾರತದ ಮಾಜಿ ರಾಷ್ಟ್ರಪತಿ ಡಾ. ಅಬ್ದುಲ್ ಕಲಾಂ ಒಂದು ಸಾರಿ ಉಪನ್ಯಾಸ ಮಾಡುತ್ತಿರುವಾಗ ಈ ದೇಶದ ದೊಡ್ಡ ಶತ್ರು ಯಾರೆಂದು ಸಭಿಕರನ್ನು ಕೇಳಿದರಂತೆ. ಕೆಲವರು ಜನಸಂಖ್ಯೆ ಎಂದರು. ಕೆಲವರು ನಿರುದ್ಯೋಗ ಎಂದರು. ಕೆಲವರು ಅನಕ್ಷರತೆ ಎಂದರು. ಕೆಲವರು ಬಡತನ ಎಂದರು. ಆದರೆ ಡಾ.ಕಲಾಂರವರು ಇವಾವುದು ನಮ್ಮ ಶತ್ರುಗಳಲ್ಲ ಇವೆಲ್ಲವನ್ನು ನಮ್ಮ ಕಠಿಣ ಪರಿಶ್ರಮದಿಂದ ನಿವಾರಿಸಬಹುದು ನಮ್ಮ "ಶತ್ರು" ಎಂದರೆ "ಸೋಮಾರಿತನ" ಎಂದಾಗ ಸಭಿಕರೆಲ್ಲ ಕರತಾಡನದ ಮೂಲಕ ತಮ್ಮ ಸಮ್ಮತಿಯನ್ನು ಸೂಚಿಸಿದರಂತೆ. ಡಾ ಅಬ್ದುಲ್ ಕಲಾಂರವರು ಈ ದೇಶ ಕಂಡ ಅತ್ಯಂತ ಉತ್ತಮ ಬುದ್ಧಿಜೀವಿ ದೊಡ್ಡ ಕನಸುಗಾರ.

**ಸ್ಥಿರತೆಗಾಗಿ ಕೆಲಸ :** ಇದು ಸ್ಪರ್ಧಾತ್ಮಕ ಯುಗ, ಮಾಹಿತಿ ತಂತ್ರಜ್ಞಾನದ ಯುಗ ವೇಗದ ಯುಗದ ಜೊತೆಗೆ ಇದು ಕೆಲಸಮಾಡುವವರ ಯುಗ. ಇಲ್ಲಿ ಬದುಕಬೇಕಾದರೆ ಕೆಲಸಮಾಡಲೇಬೇಕು.ಒಬ್ಬ ಮನುಷ್ಯನಿಗೆ ಉಣಲು ಅನ್ನ, ಉಡಲು ಬಟ್ಟೆ, ವಾಸಿಸಲು ಮನೆಯಂತಹ ಮೂಲಭೂತ ಸೌಕರ್ಯಗಳ ಸಂಪಾದನೆಗೆ ಕೆಲಸ ಮಾಡಬೇಕು. ಕುಟುಂಬದ ಬಂಧುಮಿತ್ರರ ಪ್ರೀತಿ ಸಂಪಾದನೆಗಾಗಿ ಕೆಲಸ ಮಾಡಬೇಕು ಒಳ್ಳೆಯ ಹೆಸರು ಸಾಮಾಜಿಕ ಸ್ಥಾನಮಾನಗಳಿಗಾಗಿ ಕೆಲಸ ಮಾಡಬೇಕು.ಸುರಕ್ಷತೆಗಾಗಿ ಜೀವನದ ಭದ್ರತೆಗಾಗಿ ಸ್ಥಿರತೆಗಾಗಿ ಕೆಲಸ ಮಾಡಬೇಕು ವೈಯಕ್ತಿಕ ಬೆಳವಣಿಗೆಗಾಗಿ ಸಮಾಜ ಸೇವೆಗಾಗಿ ಆತ್ಮ ತೃಪ್ತಿಗಾಗಿ ಕೆಲಸ ಮಾಡುವುದು ಅವಶ್ಯಕ. ಕೆಲಸ ಮಾಡದೇ ವಿಧಿಯಿಲ್ಲ.

**ಕೆಲಸ ನಿರ್ವಹಿಸುವ ಸಂಸ್ಕೃತಿ :** ಕೆಲಸ ಮಾಡಲೇಬೇಕು ಎಂದಾದ ಮೇಲೆ ಕೆಲಸ ಹೇಗೆ ಮಾಡಬೇಕು ಎಂಬುದನ್ನು ತಿಳಿದುಕೊಳ್ಳಬೇಕಾದುದು ಅವಶ್ಯಕ. ಸರ್.ಎಮ್.ವಿಶ್ವೇಶ್ವರಯ್ಯನವರು ಹೇಳಿದ ಮಾತು ನಾವು ಜ್ಞಾಪಕದಲ್ಲಿರಿಸಿಕೊಳ್ಳಬೇಕು. "ಗುಡಿಸುವ ಕೆಲಸವನ್ನೆ ಮಾಡಿದರೂ ವಿಶ್ವದಲ್ಲಿಯೇ ನಿನ್ನಷ್ಟು ಅಚ್ಚುಕಟ್ಟಾಗಿ ಗುಡಿಸುವವರಿಲ್ಲ" ಎನ್ನಬೇಕು ಜನ ಹಾಗೆ ಕೆಲಸ ಮಾಡಬೇಕು. ಈ ಬಗ್ಗೆ ಕೆಲವು ವಿದೇಶದಲ್ಲಿ ಕೆಲಸ ನಿರ್ವಹಿಸುವವರ ಸಂಸ್ಕೃತಿಯನ್ನು ನಾವು ಅನುಕರಿಸಬೇಕು. ಜಪಾನಿನಲ್ಲಿ ಒಬ್ಬ ಕೆಲಸಗಾರ ಒಂದು ಗಂಟೆ ಮುಂಚಿತವಾಗಿ ಮನೆಗೆ ಬಂದರೆ "ನಿನ್ನ ಗಂಡ ಕೆಲಸಗಳ್ಳ" ಎಂದು ನೆರೆಮನೆಯಾಕೆ ಹೇಳುತ್ತಾಳೆ. ಅಮೇರಿಕಾದಲ್ಲಿ ಬೆಳಗ್ಗೆ 8 ಗಂಟೆಯಿಂದ ಸಂಜೆ 5 ಗಂಟೆವರೆವಿಗೆ ಪ್ರತಿಯೊಬ್ಬನೂ ದುಡಿಯುತ್ತಾನೆ. ಒಂದು ವೇಳೆ ಒಂದು ಗಂಟೆ ತಡವಾದರೆ ಅದನ್ನು ಮತ್ತೆ ದುಡಿದು ಸಂಪಾದಿಸಿಕೊಳ್ಳುತ್ತಾನೆ. ಆದರೆ ಭಾರತದಲ್ಲಿ ಸೂರ್ಯೋದಯವಾಗುವುದೆ ಹತ್ತು ಗಂಟೆ ಎಂದು ಅಮೇರಿಕಾದಲ್ಲಿ ಚಾಲ್ತಿಯಲ್ಲಿರುವ ಮಾತು. ದಿನದ ಕೆಲಸವನ್ನು ಆರಂಭಿಸುವಾಗ ಹತ್ತು ಗಂಟೆಯಾಗಿರುತ್ತದೆ.ಬಹುಪಾಲು ಕಚೇರಿಗಳಲ್ಲಿ ಕೆಲಸ ಆರಂಭವಾಗುವುದು ಹನ್ನೊಂದು ಗಂಟೆಯ ನಂತರವೆ. ಇದಾಗ ಬಾರದು. ನಾವು ಇತರರಿಗೆ ಮಾದರಿಯಾಗಬೇಕು. ವ್ಯಕ್ತಿ ಸಂಸ್ಕೃತಿ ಹಾಗೂ ಕಾರ್ಯ ತತ್ಪರತೆಯನ್ನು ಅಳವಡಿಸುವುದು ಇಂದಿನ ಅಗತ್ಯತೆ.



ಶ್ರೀ ಬಿ. ಎ. ಮಹದೇವಪ್ಪ
ಜಂಟಿನಿಬಂಧಕರು ಹಾಗೂ
ವ್ಯವಸ್ಥಾಪಕ ನಿರ್ದೇಶಕರು,
ಡಿ.ಸಿ.ಸಿ.ಬ್ಯಾಂಕ್.ನಿ., ಶಿವಮೊಗ್ಗ.

**ಇದು ಸ್ಪರ್ಧಾತ್ಮಕ ಯುಗ, ಮಾಹಿತಿ ತಂತ್ರಜ್ಞಾನದ ಯುಗ ವೇಗದ ಯುಗದ ಜೊತೆಗೆ ಇದು ಕೆಲಸ ಮಾಡುವವರ ಯುಗ. ಇಲ್ಲಿ ಬದುಕಬೇಕಾದರೆ ಕೆಲಸ ಮಾಡಲೇಬೇಕು. ಒಬ್ಬ ಮನುಷ್ಯನಿಗೆ ಉಣಲು ಅನ್ನ, ಉಡಲು ಬಟ್ಟೆ, ವಾಸಿಸಲು ಮನೆಯಂತಹ ಮೂಲಭೂತ ಸೌಕರ್ಯಗಳ ಸಂಪಾದನೆಗೆ ಕೆಲಸ ಮಾಡಬೇಕು. ಕುಟುಂಬದ ಬಂಧುಮಿತ್ರರ ಪ್ರೀತಿ ಸಂಪಾದನೆಗಾಗಿ ಕೆಲಸ ಮಾಡಬೇಕು ಒಳ್ಳೆಯ ಹೆಸರು ಸಾಮಾಜಿಕ ಸ್ಥಾನಮಾನಗಳಿಗಾಗಿ ಕೆಲಸ ಮಾಡಬೇಕು. ಸುರಕ್ಷತೆಗಾಗಿ ಜೀವನದ ಭದ್ರತೆಗಾಗಿ ಸ್ಥಿರತೆಗಾಗಿ ಕೆಲಸ ಮಾಡಬೇಕು ವೈಯಕ್ತಿಕ ಬೆಳವಣಿಗೆಗಾಗಿ ಸಮಾಜ ಸೇವೆಗಾಗಿ ಆತ್ಮ ತೃಪ್ತಿಗಾಗಿ ಕೆಲಸ ಮಾಡುವುದು ಅವಶ್ಯಕ. ಕೆಲಸ ಮಾಡದೇ ವಿಧಿಯಿಲ್ಲ.**

**ಗುಣಾತ್ಮಕ ಚಿಂತನೆ :** ಪಂಚತತ್ವಗಳನ್ನು ಅಳವಡಿಸಿಕೊಂಡು ಕಾರ್ಯನಿರ್ವಹಿಸಬೇಕು. ಪ್ರಾಮಾಣಿಕತೆ Honesty ಶಿಸ್ತು Discipline ಬದ್ಧತೆ Committment ತಲ್ಲೀನತೆ Involvement ಹಾಗೂ ಕ್ರಮಬದ್ಧತೆ Punctuality. ಇವುಗಳು ಮೂಲಭೂತವಾಗಿ ಇರಲೇಬೇಕು. ಇವುಗಳ ಜೊತೆಗೆ ಭೌತಿಕವಾಗಿ ಒಳ್ಳೆಯ ಆರೋಗ್ಯವನ್ನು ಕಾಪಾಡಿಕೊಳ್ಳಬೇಕು. ಹೊಂದಾಣಿಕೆಯ ಮನೋಭಾವವನ್ನು ಗುಣಾತ್ಮಕ ಚಿಂತನೆಯನ್ನು ಕೆಲಸದಲ್ಲಿ ಆಸಕ್ತಿಯನ್ನು ವಿಧೇಯತೆಯನ್ನು ಕೆಲಸದ ಬಗ್ಗೆ ಸಾಮಾನ್ಯ ತಿಳುವಳಿಕೆ ಮತ್ತು ವಿಶೇಷ ಜ್ಞಾನವನ್ನು ಹಾಗೂ ಕೆಲಸದಲ್ಲಿ ಪರಿಣತಿಯನ್ನು ಪಡೆದು ಕೆಲಸ ನಿರ್ವಹಿಸಿದರೆ ಉತ್ತಮ ಕೆಲಸಗಾರನಾಗಿ ಹೊರಹೊಮ್ಮಲು ಸಾಧ್ಯ.

ಕೆಲಸ ಮಾಡುವ ವ್ಯಕ್ತಿ ಆ ಸಂಸ್ಥೆಯ ಬಗ್ಗೆ ಅಭಿಮಾನ ಆದರ ಗೌರವವನ್ನು ಹೊಂದಿರಬೇಕು. ಇದು ನನ್ನ ಸಂಘ ಇಲ್ಲಿ ನಾನು ಸದಸ್ಯರ ಹಿತ ಕಾಪಾಡುವಲ್ಲಿ ಕಾರ್ಯನಿರ್ವಹಿಸುತ್ತಿದ್ದೇನೆ ಎಂಬ ಬಗ್ಗೆ ಅರಿವು ಇರಬೇಕು.ದಕ್ಷ ನಾಯಕತ್ವ ನಿಷ್ಠಾವಂತ ಸಿಬ್ಬಂದಿ ಪ್ರಜ್ಞಾವಂತ ಸದಸ್ಯ ಸದರಿ ಸಂಘದ ಅಭಿವೃದ್ಧಿಗೆ ಅವಶ್ಯಕ. ಈ ನಿಟ್ಟಿನಲ್ಲಿ ಕಚೇರಿ, ಕಚೇರಿ ಆಡಳಿತ ಹಾಗೂ ಹಾಗೂ ಕಚೇರಿ ನಿರ್ವಹಣೆಗೆ ಆದ್ಯತೆ ಅಗತ್ಯ.

ಆಡಳಿತ ಸಂಸ್ಥೆಯ ಉದ್ದೇಶಗಳನ್ನು ಸಾಧಿಸಲು ನೀತಿ ನಿರೂಪಣೆಗಳನ್ನು ನಿರ್ಧರಿಸುತ್ತದೆ. ನಿರ್ವಹಣೆ ಆಡಳಿತಾಂಗವು ನಿರ್ಧರಿಸಿದ ನೀತಿ ನಿರೂಪಣೆಗಳನ್ನು ಕಾರ್ಯಗತಗೊಳಿಸುತ್ತದೆ. ಆಡಳಿತ ಸಂಸ್ಥೆಯ ಮೇಲ್ಪಟ್ಟ ವರ್ಗಕ್ಕೆ ಸೇರಿರುತ್ತದೆ. ಆಡಳಿತ ಮಂಡಳಿ ಶಾಸಕಾಂಗವಾಗಿ ಕೆಲಸ ಮಾಡಿದರೆ ಕಛೇರಿ ಕಾರ್ಯಾಂಗವಾಗಿ ಕರ್ತವ್ಯ ನಿರ್ವಹಿಸುತ್ತದೆ.

ಕಛೇರಿ ಸಂಸ್ಥೆಯ ಹೃದಯ ಇದ್ದಂತೆ. ಸಂಸ್ಥೆಯ ಎಲ್ಲ ವ್ಯವಹಾರಗಳೂ ಕಛೇರಿ ಮೂಲಕವೇ ನಡೆಯಬೇಕು. ಸಭೆಗಳು ಚುನಾವಣೆ ಸದಸ್ಯತ್ವ ನೋಂದಣಿ ಸಾಲ ನೀಡಿಕೆ ಸಾಲಮರುಪಾವತಿ,ಠೇವಣಿ ಸಂಗ್ರಹ ನೌಕರರ ಕೆಲಸಕಾರ್ಯಗಳು ಪತ್ರವ್ಯವಹಾರ ಪರಿವೀಕ್ಷಣೆ ಇತ್ಯಾದಿ.

**ಅಧ್ಯಕ್ಷರು ಸಂಸ್ಥೆಯ ಮುಖ್ಯಸ್ಥರು; ಮುಖ್ಯಕಾರ್ಯ ನಿರ್ವಹಣಾಧಿಕಾರಿ ಕಛೇರಿಯ ಮುಖ್ಯಸ್ಥರು :** ಕಚೇರಿಯ ಆಡಳಿತ ಹೇಗೆ ಎಂಬುದರ ಬಗ್ಗೆ ತಿಳಿಯೋಣ. ಕಛೇರಿಯ ಮುಖ್ಯಸ್ಥರು ಇಟ್ಟಿರಲೇಬೇಕಾದ ದಾಖಲಾತಿಗಳಲ್ಲಿ ಇವು ಅತೀ ಮುಖ್ಯವಾದವುಗಳು. 1. ಕಾಯಿದೆ ಪುಸ್ತಕ.2.ಸಂಸ್ಥೆಯ ನೋಂದಣೆ ಪುಸ್ತಕ. 3. ನೋಂದಣಿ ಉಪವಿಧಿಗಳು. 4. ವ್ಯವಹಾರದ ನಿಯಮಗಳು. 5. ಸೇವಾ ನಿಯಮಗಳು. 6. ಇತ್ತೀಚಿನ ಆಡಿಟ್/ಪರಿವೀಕ್ಷಣಾ ವರದಿ ಹಾಗೂ ಅವುಗಳ ಅನುಪಾಲನಾ ವರದಿ. ಸಂಸ್ಥೆಯ ಉಪವಿಧಿಗಳನ್ನು ಹಾಗೂ ವ್ಯವಹಾರದ ನಿಯಮಗಳನ್ನು ಚೆನ್ನಾಗಿ ತಿಳಿದಿರಬೇಕು.

ಸದಸ್ಯರು/ನಿರ್ದೇಶಕರು/ಗ್ರಾಹಕರು/ಇಲಾಖೆ/ಸಿಬ್ಬಂದಿಗಳಿಂದ ಬರುವ ಪತ್ರಗಳು /ದೂರವಾಣಿ./ಫ್ಯಾಕ್ಸ್/ಇ-ಮೇಲ್ ಸಂದೇಶಗಳು/ ಪತ್ರಗಳು ಇಲಾಖೆಯಿಂದ/ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯಿಂದ ಬರುವ ಸುತ್ತೋಲೆಗಳು/ನಿರ್ದೇಶನಗಳು/ಆಡಳಿತ ಮಂಡಳಿ ಸಭಾ ನಡುವಳಿಕೆಗಳು ಸರ್ವ ಸದಸ್ಯರ ಸಭೆಯ ತೀರ್ಮಾನಗಳು- ಇವೆಲ್ಲವೂ ಕಚೇರಿ ಆಡಳಿತ ಚಾಲನಾ ಶಕ್ತಿಗಳು ಇವುಗಳ ಸಕಾಲಿಕ ನಿರ್ವಹಣೆಯೇ ಕಛೇರಿ ಆಡಳಿತದ ದಕ್ಷತೆಯನ್ನು ಬಿಂಬಿಸುತ್ತದೆ.ಇವೆಲ್ಲವೂ ಕಛೇರಿ ಆಡಳಿತದ ಜೀವಾಳವಾಗಿರುತ್ತದೆ.

**ಜಾಬಚಾರ್ಟ್ ಪ್ರಕಾರ ಕೆಲಸ :** ಕಛೇರಿ ಕೆಲಸ ಸಿಬ್ಬಂದಿಯ ಹಾಜರಾತಿಯೊಂದಿಗೆ ಪ್ರಾರಂಭವಾಗುತ್ತದೆ. - ಪ್ರತಿ ಸಿಬ್ಬಂದಿಗೆ ಜಾಬಚಾರ್ಟ ನೀಡಲಾಗಿರುತ್ತದೆ. ಜಾಬಚಾರ್ಟ ಪ್ರಕಾರ ಕೆಲಸಗಳು ತೃಪ್ತಿಕರವಾಗಿ ಆಗುತ್ತಿದೆಯೆ? ಎಂಬುದರ ಬಗ್ಗೆ ಕಛೇರಿಯ ಮುಖ್ಯಸ್ಥರು ವ್ಯಯಕ್ತಿಕವಾಗಿ ಗಮನಿಸಬೇಕು. ಕಛೇರಿ ಕೆಲಸಗಳ ಬಗ್ಗೆ ಸಲಹೆ ಮಾರ್ಗ ದರ್ಶನ ಹಾಗೂ ನಿರ್ದೇಶನ ನೀಡಬೇಕು - ತಿಂಗಳಿಗೊಮ್ಮೆ ಸಿಬ್ಬಂದಿ ಸಭೆ ನಡೆಸಬೇಕು. ಇತ್ಯರ್ಥವಾಗದೆ ಬಾಕಿ

ಮುಂದಿನ ಪುಟಕ್ಕೆ...

## ಕಛೇರಿ ಆಡಳಿತ ಮತ್ತು ಕಡತ ನಿರ್ವಹಣೆ

ಉಳಿದಿರುವ ಕೆಲಸಗಳನ್ನು ಪರಿಶೀಲಿಸಿ ಸಂಸ್ಥೆಯ ಅಧ್ಯಕ್ಷರೊಂದಿಗೆ ಸಮಾಲೋಚಿಸಿ ಸೂಕ್ತ ಕ್ರಮ ವಹಿಸಬೇಕು. ಪತ್ರ ವ್ಯವಹಾರದಲ್ಲಿ ಯಾವುದೆ ನ್ಯೂನತೆಗಳು ಆಗದಂತೆ ಎಚ್ಚರ ವಹಿಸಬೇಕು.

**ಟಪಾಲು** : ಕಛೇರಿಗೆ ಬರುವ ಎಲ್ಲ ಕಾಗದ ಪತ್ರಗಳನ್ನು "ಟಪಾಲು" ಎಂದು ಕರೆಯಲಾಗುತ್ತದೆ. ಈ ಟಪಾಲುಗಳನ್ನು ಕಛೇರಿಯ ಮುಖ್ಯಸ್ಥರು ತೆರೆಯಬೇಕೆ ಅಥವಾ ಯಾವ ಅಧಿಕಾರಿ ತೆರೆಯಬೇಕು ಎಂಬುದರ ಬಗ್ಗೆ ಸ್ಪಷ್ಟತೆಯಿರಬೇಕು. ಅತ್ಯಂತ ಮಹತ್ವದ ವಿಷಯಗಳಲ್ಲಿ /ತುರ್ತು ಸಂದರ್ಭಗಳಲ್ಲಿ/ಆಡಳಿತ ಮಂಡಳಿ ಸಭೆ /ಸರ್ವ ಸದಸ್ಯರ ಸಭೆ ಮುಂತಾದ ಸಂದರ್ಭಗಳಲ್ಲಿ ಕಛೇರಿಯ ಮುಖ್ಯಸ್ಥರೆ ವೈಯಕ್ತಿಕ ಗಮನ ಹರಿಸಬೇಕು. ಮತ್ತು ಟಪಾಲು ಹಂತದಲ್ಲಿಯೇ ಪತ್ರಗಳ ಮೇಲೆ ಸೂಕ್ತ ಸೂಚನೆ ನೀಡುವುದು ಒಳ್ಳೆಯದು.

ಟಪಾಲನ್ನು ಮುಖ್ಯಸ್ಥರು ನೋಡಿದ ನಂತರ, ಎಲ್ಲ ಕಾಗದ ಪತ್ರಗಳನ್ನು ಅವು ಬಂದ ದಿನವೇ ಸ್ವೀಕೃತಿ ಪುಸ್ತಕದಲ್ಲಿ ನೋಂದಣಿ ಮಾಡಬೇಕು.- ನಂತರ ವಿಭಾಗವಾರು-ವಿಷಯವಾರು ವಿಂಗಡಿಸಿ ಪ್ರತಿಯೊಂದು ಪತ್ರದ ಮೇಲೆ ಅವು ಬಂದ ದಿನಾಂಕದ ಮುದ್ರೆಯನ್ನು ಹಾಕಬೇಕು - ನಂತರ ಸ್ವೀಕೃತಿ ಪುಸ್ತಕದ ಕ್ರಮಾಂಕವನ್ನು ನಮೂದಿಸಬೇಕು-ಸಂಬಂಧಿಸಿದ ವಿಭಾಗಕ್ಕೆ ಕಳುಹಿಸಿ ವಿಭಾಗದ ಮುಖ್ಯಸ್ಥರ ಸಹಿ ಪಡೆದಿರಬೇಕು.

**ಆದ್ಯತೆ ಮೇಲೆ ಅಟೆಂಡ್** : ದಿನ ನಿತ್ಯ ಬರುವ ಕಾಗದ-ಪತ್ರಗಳಲ್ಲಿ ಎರಡು ವಿಧ. ಈಗಾಗಲೆ ಬಾಕಿ ಇರುವ ವಿಷಯಗಳಿಗೆ ಸಂಬಂಧಿಸಿದ್ದು. - ಹೊಸ ಉಲ್ಲೇಖಗಳು.- ಬಾಕಿ ಇರುವ ವಿಷಯಗಳಿಗೆ ಬಂದ ಪತ್ರಗಳನ್ನು ಸಂಬಂಧಿಸಿದ ಕಡತದಲ್ಲಿಟ್ಟು ವ್ಯವಹರಿಸಬಹುದು.- ಹೊಸ ಪತ್ರಗಳನ್ನು ಪರಿಶೀಲಿಸಿ ಪ್ರತ್ಯೇಕ ಕಡತವನ್ನು ಪ್ರಾರಂಭಿಸಬೇಕು.

ವಿಷಯ ನಿರ್ವಾಹಕರು ಪ್ರತಿಯೊಂದು ಕಾಗದ ಪತ್ರಗಳ ವಿಚಾರದಲ್ಲಿ ವಿಳಂಬವಿಲ್ಲದಂತೆ ಕ್ರಮವಿಡಬೇಕು. ಈ ದಿನ/ತುರ್ತು/ಮುಖ್ಯ ಅರ್ಜೆಂಟ್/ಚರ್ಚಿಸಿ ಎಂದು ಗುರ್ತಿಸಿದ ಪತ್ರಗಳನ್ನು ಆದ್ಯತೆಯ ಮೇಲೆ ಅಟೆಂಡ್ ಮಾಡಬೇಕು. ಇಂತಹ ಪತ್ರಗಳನ್ನು ಎರಡು ದಿನಗಳ ಒಳಗಡೆ ವ್ಯವಹರಿಸಬೇಕು. ಉಳಿದ ಪತ್ರಗಳು ಐದು ದಿನಗಳ ಒಳಗೆ ವಿಲೇ ಆಗುವ ಬಗ್ಗೆ ಕ್ರಮವಹಿಸಬೇಕು.

ಪ್ರತಿಯೊಂದು ವಿಭಾಗದಲ್ಲಿ ಸುತ್ತೋಲೆ ಕಡತವಿರಬೇಕು.- ಕಛೇರಿ ಮುಖ್ಯಸ್ಥರ ಬಳಿ ಮಾಸ್ಟರ ಸರ್ಕುಲರ್ ಫೈಲ Master circular File ಇರಬೇಕು. ಸುತ್ತೋಲೆ ಕಡತಗಳನ್ನು ಪ್ರತಿವರ್ಷವೂ ತೆರೆಯಬೇಕಿಲ್ಲ,ಆದರೆ ಕಡತ ಬಹಳ ದೊಡ್ಡದಾಗಿ ಬೆಳೆದಾಗ,ಹೊಸ ಕಡತವನ್ನು ತೆರೆಯಬಹುದು. ಸುತ್ತೋಲೆ ಕಡತವು ವಿಷಯಕ್ಕೆ ಅನುಗುಣವಾಗಿ ದಿನಾಂಕಕ್ಕೆ ಅನುಗುಣವಾಗಿ ಇರುವುದು ಒಳ್ಳೆಯದು.

ಒಂದು ಸಂಸ್ಥೆಯಿಂದ ಹೊರಹೋಗುವ ಪತ್ರಗಳು ವೈಯಕ್ತಿಕ ಪತ್ರಗಳಲ್ಲ/ ಅವು ಸಂಸ್ಥೆಯ ಅಧಿಕೃತ ಪತ್ರಗಳು.-ಸಂಸ್ಥೆಯ ಮುಖ್ಯಸ್ಥರು/ಕಛೇರಿ ಮುಖ್ಯಸ್ಥರು ತಮ್ಮ ಹುದ್ದೆಯ/ಅಧಿಕಾರದ ಆಧಾರದಲ್ಲಿ ಈ ಪತ್ರಗಳನ್ನು ಬರೆಯಬಹುದು.- ಒಂದು ಪತ್ರ ಬಂದಾಗ ಯಾವ ಕಛೇರಿಯಿಂದ/ಯಾರಿಂದ ಬಂದಿದೆ ಅದರ ವಿಳಾಸವೇನು? ಅದರ ದಿನಾಂಕ ಯಾವುದು? ಅದಕ್ಕೆ ಸಂಖ್ಯೆ ಇದೆಯೆ?ಯಾರಿಗೆ ಬರೆಯಲಾಗಿದೆ?ವಿಷಯವೇನು? ಬರೆಯಲು ಕಾರಣವೇನು? ಅದರಲ್ಲಿ ಏನು ಹೇಳಿದೆ? ನಮ್ಮಿಂದ ಏನನ್ನು ನಿರೀಕ್ಷಿಸಲಾಗಿದೆ? ಅದನ್ನು ಬರೆದವರು ಯಾರು?ಅವರ ಅಧಿಕಾರ ಮತ್ತು ಹುದ್ದೆ ಇವುಗಳನ್ನು ಅರ್ಥ ಮಾಡಿಕೊಳ್ಳಬೇಕು. ಆಗ ಮಾತ್ರ ಕಛೇರಿ ಆಡಳಿತಕ್ಕೆ ಚಾಲನೆ ಬರುತ್ತದೆ.

**ಕಛೇರಿ ಟಿಪ್ಪಣಿಗಳು** : ಪ್ರತಿಯೊಂದು ಕಡತದಲ್ಲಿ ವಿಷಯಕ್ಕೆ ಸಂಬಂಧಿಸಿದ ಹಾಗೆ ಕಛೇರಿ ಟಿಪ್ಪಣಿಗಳು ಅವಶ್ಯಕ.ವಿಷಯಗಳ ಹಿನ್ನೆಲೆ-ಸುತ್ತೋಲೆಗಳ ನಿರ್ದೇಶನ-ಆಡಳಿತ ಮಂಡಳಿಯ ನಿರ್ಣಯಗಳ ಬಗ್ಗೆ ವಿಷಯ ನಿರ್ವಾಹಕರು ಕಛೇರಿ ಟಿಪ್ಪಣಿಯಲ್ಲಿ ನಮೂದಿಸಿದರೆ ತೀರ್ಮಾನ ತೆಗೆದುಕೊಳ್ಳಲು ಸುಲಭವಾಗುತ್ತದೆ.- ಕಛೇರಿ ಟಿಪ್ಪಣಿಯಲ್ಲಿ ಮೇಲ್ಕಂಡ ಅಂಶಗಳನ್ನು ಸಂಕ್ಷಿಪ್ತವಾಗಿ ವಿವರಿಸಿದ ನಂತರ ಕಛೇರಿ ಮುಖ್ಯಸ್ಥರು ಹಾಗೂ ಸಂಸ್ಥೆಯ ಅಧ್ಯಕ್ಷರು ತಮ್ಮ ಆದೇಶ ನೀಡಲು ಆ ಟಿಪ್ಪಣಿಯಲ್ಲಿ ಸಾಕಷ್ಟು ಸ್ಥಳ ಬಿಟ್ಟಿರಬೇಕು. ನಂತರ ಕರಡನ್ನು ಸಿದ್ಧಪಡಿಸಿ,ಅನುಮೋದನೆ ಪಡೆದು ನಂತರ ಶುದ್ಧ ಪ್ರತಿಗೆ ಸಹಿ ಪಡೆದು ಸಂಬಂಧಿಸಿದವರಿಗೆ ರವಾನೆಯಾಗುವಂತೆ ನೋಡಿಕೊಳ್ಳಬೇಕು.

ಅರೆ ಸರ್ಕಾರಿ ಪತ್ರ/ಅರೆ ಅಧಿಕೃತ ಪತ್ರಗಳು. ಮಾಮೂಲು ಪತ್ರ ವ್ಯವಹಾರದಿಂದಾಗಿ ಕಾಲ ವಿಳಂಬವಾಗುವುದನ್ನು ತಪ್ಪಿಸುವುದಕ್ಕಾಗಿ- ನಿರ್ದಿಷ್ಟ ಕೆಲಸ ವಿಳಂಬವಾದಾಗ, ಆ ಕೆಲಸವನ್ನು ನೆನಪಿಸಿ ಕೂಡಲೇ ಕ್ರಮ ಕೈಗೊಳ್ಳಬೇಕೆಂದು ನೆನಪಿಸುವ ಪತ್ರ, ಒಬ್ಬ ಅಧಿಕಾರಿ ಇನ್ನೊಬ್ಬ ಅಧಿಕಾರಿಗೆ ಸಂಸ್ಥೆಯ ವ್ಯವಹಾರದ ಬಗ್ಗೆ ಖಾಸಗಿಯಾಗಿ ಏನನ್ನಾದರೂ ತಿಳಿಸಬೇಕಿದ್ದಾಗ ಅಥವಾ ಇತರರು ವಿಷಯವನ್ನು ತಿಳಿಸಬಾರದು ಎನಿಸಿದಾಗ ಒಬ್ಬ ಅಧಿಕಾರಿಯ ಕೆಲಸ ಆತನ ಮೇಲಧಿಕಾರಿಗೆ ತೃಪ್ತಿಎನಿಸಿದಾಗ ಅವನಿಗೆ ಮೆಚ್ಚುಗೆ ಸೂಚಿಸಲು ಅಥವಾ ಅವನ ಕೆಲಸ ತೀರ ಅಸಮರ್ಪಕವಾಗಿದ್ದಾಗ ಅವನಿಗೆ ತಿಳಿಸಿ ಎಚ್ಚರಿಕೆ ನೀಡಲು ಇಂತಹ ಪತ್ರವನ್ನು ಬರೆಯಲಾಗುತ್ತದೆ.

ಕಡತ ನಿರ್ವಹಣೆ ಕಡತದಲ್ಲಿ ಎರಡು ಭಾಗ. ಟಿಪ್ಪಣಿ ಭಾಗ ಮತ್ತು ಪತ್ರ ವ್ಯವಹಾರ ಭಾಗ ಎಡಭಾಗದಲ್ಲಿ ಟಿಪ್ಪಣಿ .ಟಿಪ್ಪಣಿಯ ಹಾಳೆಗಳನ್ನು ಮೇಲಿನಿಂದ ಕೆಳಕ್ಕೆ ಜೋಡಿಸಬೇಕು. ಬಲಭಾಗದಲ್ಲಿ ಪತ್ರ ವ್ಯವಹಾರ ಪತ್ರಗಳನ್ನು ಕೆಳಗಿನಿಂದ ಮೇಲಕ್ಕೆ ತಾರೀಖುವಾರು ಜೋಡಿಸಬೇಕು. ಹೊಸ ಕಡತವನ್ನು ತೆರೆಯುವಾಗ ವಿಷಯ ವರ್ಷ ಕಡತದ ಸಂಖ್ಯೆ ನಮೂದಿಸಬೇಕು. ಫೈಲುಗಳಿಗೆ ರಿಜಿಸ್ಟರ ಇಡುವುದು ಒಳ್ಳೆಯದು.

ಉತ್ತಮ ಕಛೇರಿ ಆಡಳಿತ ಮತ್ತು ಕಡತಗಳ ವಿಲೇವಾರಿ ಮಾಡುವಾಗ ಕೆಲಸದಲ್ಲಿ ಬದ್ಧತೆ ಮತ್ತು ತಲ್ಲೀನತೆ- ಆತ್ಮೀಯ ಮಾತುಗಾರಿಕೆ ನಗುಮುಖದಿಂದ ಕೆಲಸ ನಿರ್ವಹಿಸುವುದು ಇಷ್ಟಪಟ್ಟು ಕೆಲಸ ಮಾಡುವುದು ಪರಿಣಾಮಕಾರಿ ಕಮ್ಯೂನಿಕೇಶನ ಕೆಲಸದಲ್ಲಿ ಪರಿಣಿತಿ ಪ್ರತಿಭೆಯ ಜೊತೆಗೆ ಚಾತುರ್ಯ ಇವುಗಳನ್ನು ರೂಢಿಸಿಕೊಳ್ಳುವುದು ಅತ್ಯಂತ ಅವಶ್ಯಕ. ನಿಮ್ಮ ಉತ್ತಮ ಭವಿಷ್ಯದ ರಹಸ್ಯ ನೀವು ಮಾಡುವ ಕೆಲಸಗಳಲ್ಲಿ ಅಡಗಿದೆ.

## ಕಾರ್ಕಳದಲ್ಲಿ ಶ್ರೀ ಭಾರ್ಗವ ವಿವಿಧೋದ್ದೇಶ ಸೌಹಾರ್ದ ಸಹಕಾರಿ ಪ್ರಾರಂಭ



ಕಾರ್ಕಳದಲ್ಲಿ ಶ್ರೀ ಭಾರ್ಗವ ವಿವಿಧೋದ್ದೇಶ ಸೌಹಾರ್ದ ಸಹಕಾರಿಯನ್ನು ಮೈಸೂರಿನ ಉದ್ಯಮಿ ಶ್ರೀ ಬಾಲಚಂದ್ರ ಕೋಂಗ್ರೆಯವರು ಉದ್ಘಾಟಿಸಿದರು. ಸಮಾರಂಭದ ಅಧ್ಯಕ್ಷತೆಯನ್ನು ಖ್ಯಾತ ಶಿಲ್ಪಿ ಶ್ರೀ ಡಿ. ಪಿ. ದಿವಾಕರರವರು ವಹಿಸಿದ್ದರು. ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಉಡುಪಿ ಜಿಲ್ಲಾ ಸಹಕಾರಿಗಳ ಉಪನಿಬಂಧಕಿ ಶ್ರೀಮತಿ ನಯನ ಹಿರಿಯ ಸಹಕಾರಿ ಶ್ರೀ ಎನ್.ಎಸ್. ಗೋವಿಲೆಯವರು, ಶ್ರೀ ಶ್ರೀಧರ ಭಿಕ್ಷೆ ಅಧ್ಯಕ್ಷರು ಬೆಳ್ತಂಗಡಿ ತಾಲ್ಲೂಕು ರಬ್ಬರು ಬೆಳೆಗಾರರ ಸಹಕಾರ ಸಂಘ ಶ್ರೀ ನಾಗೇಶ ಡೋಂಗ್ರೆ ಸಾಗರ ಶ್ರೀ ಶಾಂತಾರಾಂ ಚಾಪಖೂರಕರ ಶ್ರೀ ಎಂ.ನಾರಾಯಣ ಗೋಖಲೆ ಮುಂತಾದವರು ಉಪಸ್ಥಿತರಿದ್ದರು.


# ಪ್ರಗತಿಪಥದಲ್ಲಿ ಬಾಪೂಜಿ ಪತ್ತಿನ ಸೌಹಾರ್ದ ಸಹಕಾರಿ



ಶ್ರೀ ಎಸ್. ಆರ್. ಪಾಟೀಲ
ಅಧ್ಯಕ್ಷರು



ಶ್ರೀ ಜಿ.ಎಸ್. ಪಾಟೀಲ
ಉಪಾಧ್ಯಕ್ಷರು



ಶ್ರೀ ಆರ್. ಬಿ. ಕುರ್ತಕೋಟಿ
ಮುಖ್ಯ ಕಾರ್ಯನಿರ್ವಾಹಕರು



ಶ್ರೀ ಸಿ.ಎಸ್. ಮೋಟಗಿ
ಪ್ರಧಾನ ವ್ಯವಸ್ಥಾಪಕರು

ಅನುಭವಿ ಸಹಕಾರಿ ಮುಖಂಡ, ಜಿಲ್ಲೆಯ ಹಿರಿಯ ರಾಜಕಾರಣಿ ವಿಧಾನ ಪರಿಷತ ಸದಸ್ಯ ಶ್ರೀ ಎಸ್. ಆರ್.ಪಾಟೀಲರವರ ನೇತೃತ್ವದಲ್ಲಿ ಸಮಾನ ಮನಸ್ಕ ಸಹಕಾರಿಗಳ ಸಹಕಾರದೊಂದಿಗೆ ದಿನಾಂಕ 13-3-2008 ರಲ್ಲಿ ಕೇವಲ 1702 ಸದಸ್ಯರು ಹಾಗೂ ರೂ.12 ಲಕ್ಷ ಬಂಡವಾಳದೊಂದಿಗೆ ಪ್ರಾರಂಭವಾಗಿರುವ ಈ ಸೌಹಾರ್ದ ಸಹಕಾರಿಯು ಇದೀಗ ರಾಜ್ಯಾದ್ಯಂತ 56 ಶಾಖೆಗಳನ್ನು ಹೊಂದಿರುವುದರ ಜೊತೆಗೆ 54 ಕೋಟಿ ರೂಗಳ ಠೇವಣಿ ಹಣವಿದು, 36 ಕೋಟಿ ರೂಗಳ ಸಾಲ ವಿತರಣೆ ಮಾಡಿದ್ದಾರೆ.

16000 ಸದಸ್ಯರನ್ನು ಹೊಂದಿರುವ ಈ ಸಹಕಾರಿಯು 160.11 ಲಕ್ಷ ಶೇರು ಮೊಬಲಗನ್ನು ಹೊಂದಿ ಸೌಹಾರ್ದ ಸಹಕಾರಿ ಕ್ಷೇತ್ರದ ಜನಪ್ರಿಯ ಸಂಸ್ಥೆಯಾಗಿದೆ. ಹೆಚ್ಚಿಗೆ ಗ್ರಾಮೀಣ ಪ್ರದೇಶದ ಸ್ವಸಹಾಯ ಗುಂಪುಗಳಿಗೆ ಸಾಲ ನೀಡುವ ಸಂಸ್ಥೆಯೆನಿಸಿಕೊಂಡಿರುವ ಈ ಸಹಕಾರಿಯು ಇದುವರೆಗೆ 5000 ಕ್ಕೂ ಹೆಚ್ಚು ಮಹಿಳೆಯರು ಇದರ ಪ್ರಯೋಜನ ಪಡೆದಿದ್ದಾರೆ.

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ನೆರವಿನಿಂದ ಇತ್ತೀಚೆಗೆ ಇ-ಸ್ಟಾಂಪಿಂಗ ಸೇವೆಯನ್ನು 7 ಕೇಂದ್ರಗಳಲ್ಲಿ ಪ್ರಾರಂಭಿಸಿ ಸಾರ್ವಜನಿಕರಿಗೆ ಉತ್ತಮ ಸೇವೆಯನ್ನು ಸಲ್ಲಿಸುತ್ತಿದೆ. ಅಧ್ಯಕ್ಷ ಶ್ರೀ ಎಸ್.ಆರ್.ಪಾಟೀಲ ಹಾಗೂ ಶ್ರೀ ಜಿ.ಎಸ್.ಪಾಟೀಲ ಉಪಾಧ್ಯಕ್ಷರು ಸೇರಿದಂತೆ 13 ಜನರು ಆಡಳಿತ ಮಂಡಳಿಯಲ್ಲಿದ್ದಾರೆ.ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಶ್ರೀ ಆರ್.ಬಿ.ಕುರ್ತಕೋಟಿಯವರ ಪ್ರಧಾನ ವ್ಯವಸ್ಥಾಪಕ ಶ್ರೀ ಎಸ್.ಸಿ.ಮೋಟಗಿಯವರುಗಳ ನಾಯಕತ್ವದಲ್ಲಿ 182 ಉದ್ಯೋಗಿಗಳು ಉತ್ತಮವಾಗಿ ಕಾರ್ಯನಿರ್ವಹಿಸಿ ಸಹಕಾರಿಯ ಅಭಿವೃದ್ಧಿಯಲ್ಲಿ ಸಹಕರಿಸುತ್ತಿದ್ದಾರೆ.

ಮುಂಬರುವ ಮಾರ್ಚ 2011 ಕ್ಕೆ 75 ಕೋಟಿ ರೂಗಳ ಠೇವಣಿ ಸಂಗ್ರಹಿಸುವ ಅನೇಕ ಸಾಲೇತರ ಯೋಜನೆಗಳನ್ನು ಹಮ್ಮಿಕೊಂಡು ರಾಜ್ಯದಲ್ಲಿಯೇ ಒಂದು ಮಾದರಿ ಸಹಕಾರಿ ಸಂಸ್ಥೆಯಾಗಿ ಕಾರ್ಯನಿರ್ವಹಿಸುವ ಮತ್ತು 1 ಕೋಟಿ ರೂಗಳ ಲಾಭಗಳಿಸುವ ಯೋಜನೆಯನ್ನು ಈ ಸಹಕಾರಿಯು ಹೊಂದಿರುತ್ತದೆ.

## ಬೆಳಗಾವಿ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅವಲೋಕನಾ ಸಭೆ

...3ನೇ ಪುಟದಿಂದ

ಈ ಹಿನ್ನೆಲೆಯಲ್ಲಿ ಎಲ್ಲ ಸೌಹಾರ್ದ ಸಹಕಾರಿಗಳ ಕಾರ್ಯ ಚಟುವಟಿಕೆಗಳ ಅವಲೋಕನಾ ಸಭೆಯನ್ನು ಏರ್ಪಡಿಸಲಾಗುತ್ತದೆ ಇದೊಂದು ವಿನೂತನ ಪ್ರಯೋಗವಾಗಿದೆ ಎಂದು ತಿಳಿಸುತ್ತ ಸೌಹಾರ್ದ ಸಹಕಾರಿಗಳ ಆಡಳಿತ ಮಂಡಲಿಯವರು ಹಾಗೂ ಸಿಬ್ಬಂದಿಯವರು ತುಂಬ ಶ್ರದ್ಧೆ ಹಾಗೂ ಪ್ರಾಮಾಣಿಕತೆಯಿಂದ ಕಾರ್ಯನಿರ್ವಹಿಸಲು ಕರೆನೀಡಿದರು. ಅಧ್ಯಕ್ಷತೆ ವಹಿಸಿ ಮಾತನಾಡಿದ ಸಂಯುಕ್ತ ಸಹಕಾರಿಯ ಶ್ರೀ ಎಸ್.ಆರ್.ಸತೀಶಚಂದ್ರರವರು ದಶಮಾನೋತ್ಸವ ಆಚರಣೆಯ ಈ ಸಂದರ್ಭದಲ್ಲಿ ಸೌಹಾರ್ದ ಸಹಕಾರಿಗಳಲ್ಲಿ ಜಾಗೃತಿಮೂಡಿಸುವ ಅವರವರ ಕೆಲಸ ಕಾರ್ಯಗಳು ಕಾನೂನಿನ ಚೌಕಟ್ಟಿನ ಒಳಗೆ ನಡೆಯುತ್ತಿರುವುದರ ಬಗ್ಗೆ ತಿಳಿದುಕೊಳ್ಳುವ ತಪ್ಪಿದವರಿಗೆ ಎಚ್ಚರಿಕೆ ನೀಡುವ ದೃಷ್ಟಿಯಿಂದ ಈ ಕಾರ್ಯ ಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದರು.

ಸೌಹಾರ್ದ ಸಹಕಾರಿಗಳು ಸಾರ್ವಜನಿಕರ ಹಣದ ಧರ್ಮದರ್ಶಿಗಳಂತೆ ಹಾಗೆ ಕಾರ್ಯನಿರ್ವಹಿಸ ಬೇಕಾಗುತ್ತದೆ. ಯಾವುದೇ ಕಾರಣಕ್ಕೂ ಈ ಹಣದ ದುರುಪಯೋಗವಾಗಬಾರದು. ಸೌಹಾರ್ದ ಸಹಕಾರಿ ಕ್ಷೇತ್ರಕ್ಕೆ ಕೆಟ್ಟ ಹೆಸರು ಬರಬಾರದು. ಈ ಸೌಹಾರ್ದ ಸಹಕಾರಿ ಕ್ಷೇತ್ರದ ಬೆಳವಣಿಗೆಯನ್ನು ಸಹಿಸದ ಕೆಲವು ಜನ ನಮ್ಮ ಕೆಲಸಕಾರ್ಯಗಳಲ್ಲಿ ತೊಂದರೆಯುಂಟುಮಾಡುತ್ತಿದ್ದಾರೆ.

ಇವೆಲ್ಲವುಗಳನ್ನು ಗಮನಿಸಿ ಸೌಹಾರ್ದ ಸಹಕಾರಿಗಳು ಕಾರ್ಯನಿರ್ವಹಿಸಲು ಸೂಚನೆಗಳನ್ನು ನೀಡುವುದರ ಜೊತೆಗೆ ಉತ್ತಮ ಕಾರ್ಯನಿರ್ವಹಿಸುವ ಸಹಕಾರಿಗಳ ಚಟುವಟಿಕೆಗಳನ್ನು ಬೇರೆ ಬೇರೆ ಸೌಹಾರ್ದ ಸಹಕಾರಿಗಳಿಗೆ ಪರಿಚಯಿಸುವುದು ಸೌಹಾರ್ದ ಸಹಕಾರಿಗಳ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಪ್ರಯತ್ನಿಸುವುದು ಸೌಹಾರ್ದ ಸಹಕಾರಿ ಕಾಯ್ದೆ ನಿಯಮ ಹಾಗೂ ಸಂಯುಕ್ತ ಸಹಕಾರಿ ಮಾರ್ಗ ಸೂಚಿಗಳನ್ನು ಪಾಲಿಸದ ಸಹಕಾರಿಗಳನ್ನು ಗುರುತಿಸಿ ಎಚ್ಚರಿಕೆ ನೀಡುವುದರ ಜೊತೆಗೆ ಅವಶ್ಯಕವೆನಿಸಿದಲ್ಲಿ ಶಿಸ್ತಿನ ಕ್ರಮ ಜರುಗಿಸುವುದು ಈ ಅವಲೋಕನಾ ಸಭೆಗಳ ಉದ್ದೇಶವಾಗಿದೆ ಎಂದರು.

ಈ ಎರಡು ದಿನಗಳ ಅವಲೋಕನಾ ಸಭೆಗಳಲ್ಲಿ ಜಿಲ್ಲೆಯ ಬೆಳಗಾವಿ ಹಾಗೂ ಖಾನಾಪೂರ ತಾಲ್ಲೂಕುಗಳಿಂದ 34 ಸೌಹಾರ್ದ ಸಹಕಾರಿಗಳು 87 ಪ್ರತಿನಿಧಿಗಳು ಹುಕ್ಕೇರಿ ತಾಲ್ಲೂಕಿನಿಂದ 31 ಸೌಹಾರ್ದ ಸಹಕಾರಿಗಳು 75 ಪ್ರತಿ ನಿಧಿಗಳು ಅಥಣಿ ಹಾಗೂ ಚಿಕ್ಕೋಡಿ ತಾಲ್ಲೂಕುಗಳಿಂದ 28 ಸೌಹಾರ್ದ ಸಹಕಾರಿಗಳು 85 ಪ್ರತಿನಿಧಿಗಳು ಹಾಗೂ ಬೈಲಹೊಂಗಲ, ರಾಮದುರ್ಗ, ಗೋಕಾಕ, ಸವದತ್ತಿ ಹಾಗೂ ರಾಯಬಾಗ 28 ಸೌಹಾರ್ದ ಸಹಕಾರಿಗಳು 88 ಒಟ್ಟಾರೆ 121 ಸೌಹಾರ್ದ ಸಹಕಾರಿಗಳಿಂದ 335 ಪ್ರತಿನಿಧಿಗಳು ಭಾಗವಹಿಸಿದ್ದರು.

ಕಾರ್ಯಕ್ರಮದಲ್ಲಿ ಭಾಗವಹಿಸಿದ ಎಲ್ಲ ಸಹಕಾರಿಗಳು ಈ ರೀತಿಯ ಅವಲೋಕನಾ ಸಭೆಗಳನ್ನು ನಡೆಸುವುದು ಅವಶ್ಯಕವೆಂದು ಅಭಿಪ್ರಾಯ ಸೂಚಿಸಿದರು.

**ಗಮನಿಸಿ :**

"ಯಶಸ್ವಿ ಸಹಕಾರಿಗಳ ಯಶೋಗಾಥೆಯ ಅಂಕಣದಲ್ಲಿ ನಿಮ್ಮ ಸಹಕಾರಿಯ ಪ್ರಗತಿಯನ್ನು ಪ್ರಕಟಿಸಬೇಕೇ? ಹಾಗಿದ್ದಲ್ಲಿ ಕಡಿಮಾಡದೆ ನಿಮ್ಮ ಸಹಕಾರಿಯ ಪ್ರಗತಿಚಿತ್ರ ಹಾಗೂ ಪ್ರಕಟಣೆಗೆ ಯೋಗ್ಯ 2-3 ಛಾಯಾಚಿತ್ರಗಳನ್ನು ಸಿ.ಡಿ.ಯಲ್ಲಿ ಹಾಕಿ ಕಳುಹಿಸಿಕೊಡಿ. "ವ್ಯಕ್ತಿ ಅಂಕಣದಲ್ಲಿ ನಿಮಗೆ ಪರಿಚಯವಿರುವ ಉತ್ತಮ ಸಹಕಾರಿಗಳ ಪರಿಚಯವನ್ನು ಪ್ರಕಟಿಸಬೇಕೇ? ಹಾಗಿದ್ದಲ್ಲಿ ಅವರ ಬಗ್ಗೆ ಸಾಧನೆಯ ವಿವರಗಳನ್ನು ಹಾಗೂ ಒಂದು ಇತ್ತೀಚಿನ ಛಾಯಾಚಿತ್ರವನ್ನು ಕಳುಹಿಸಿ. ಇದರಲ್ಲಿ ಅವರ ಜನನ ತಾರೀಖು, ಹುಟ್ಟಿದ ಸ್ಥಳ, ತಂದೆ - ತಾಯಿಯರ ಹೆಸರು, ಕುಟುಂಬದ ವ್ಯಕ್ತಿ, ವಾಸಿಸುವ ಸ್ಥಳ, ಸೇವೆ ಸಲ್ಲಿಸುತ್ತಿರುವ ಸಹಕಾರಿ ಸಂಸ್ಥೆಗಳ ಹೆಸರು, ಪಡೆದಿರುವ ಪ್ರಶಸ್ತಿಗಳು, ಇತರೆ ಕ್ಷೇತ್ರದಲ್ಲಿ ಅಂದರೆ ಶೈಕ್ಷಣಿಕ, ಧಾರ್ಮಿಕ, ಸಾಮಾಜಿಕ, ಸಾಹಿತ್ಯ, ಕಲೆ, ಸಂಗೀತ, ರಾಜಕೀಯ ಇತ್ಯಾದಿ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿರುವ ಮತ್ತು ಸೇವೆ ಸಲ್ಲಿಸುತ್ತಿರುವ ಹಾಗೂ ಪಡೆದ ಪ್ರಶಸ್ತಿಗಳ ವಿವರ ಮತ್ತು ಸಹಕಾರಿ ಕ್ಷೇತ್ರದ ಬಗ್ಗೆ ಅವರ ಅಭಿಪ್ರಾಯ ಮತ್ತು ಯುವಕರಿಗೆ ಅವರ ಸಂದೇಶಗಳು ಇರಬೇಕು.

ಸ್ವಾಭಿಮಾನಿ ಸಹಕಾರಿ


Swabhimani Sahakari, Monthly, Posted at Wilson Garden Post Office 560027, Posting Day 12th
Reg. No. RNP/BGS/2094/2008-10 Licence to post
RNI Ref: KARBILO1214/10/1/2002-TC

## ಶ್ರೇಷ್ಟ ಸಹಕಾರಿ

# ತತ್ವನಿಷ್ಠ ಹಾಗೂ ಕ್ರಿಯಾಶೀಲ ಸಹಕಾರಿ : ಶ್ರೀ ಎಂ.ಎಸ್.ವೆಂಕಟೇಶ

ಶ್ರೀ ಎಂ.ಎಸ್.ವೆಂಕಟೇಶ, ಸಾಗರದ ಮಯೂರ ಸೌಹಾರ್ದ ಸಹಕಾರಿಯ ಸ್ಥಾಪಕ ಅಧ್ಯಕ್ಷರು. ಸುದೀರ್ಘ ಕಾಲ ಕಾರ್ಪೋರೇಶನ್ ಬ್ಯಾಂಕಿನಲ್ಲಿ ಸೇವೆ ಸಲ್ಲಿಸಿದ ಶ್ರೀಯುತರು ಸ್ವಯಂ ನಿವೃತ್ತಿ ಪಡೆದು ಸ್ವಸ್ಥಾನದಲ್ಲಿ ನಿಂತು ಸಮಾಜದ ಸೇವೆ ಮಾಡಬೇಕೆಂದು ನಿಶ್ಚಯಿಸಿ ಸಹಕಾರ ಕ್ಷೇತ್ರದ ಬಗ್ಗೆ ಚಿಂತಿಸಿದರು. ಅಧ್ಯಯನ ಮಾಡಿದರು. ತತ್ವಗಳನ್ನು ಅರಿತರು. ಕಾರ್ಯಾಚರಣೆಯ ಬಗ್ಗೆ ಜ್ಞಾನ ಸಂಪಾದಿಸಿದರು. ಹಿರಿಯರನ್ನು ಅನುಭಾವಿಗಳನ್ನು ಸಂಪರ್ಕಿಸಿದರು. ಸೌಹಾರ್ದ ಸಹಕಾರಿ ಸ್ಥಾಪನೆಯ ಮೂಲಕ ಇದಕ್ಕೆ ಅವಕಾಶವಿದೆಯೆಂದು ನಂಬಿದರು. ನಿಶ್ಚಯಿಸಿದರು. ಸಮಾನ ಮನಸ್ಕ ಸ್ನೇಹಿತರ ಸಹಕಾರ ಪಡೆದರು 2003–04 ರಲ್ಲಿ ಸಾಗರದಲ್ಲಿ ಮಯೂರ ಸೌಹಾರ್ದ ಕ್ರೆಡಿಟ್ ಕೊ–ಆಪರೇಟಿವ್ ಪ್ರಾರಂಭಿಸಿದರು.

ಇವರ ನೇತೃತ್ವದಲ್ಲಿ ಈ ಸಹಕಾರಿ ಕಳೆದ 7 ವರ್ಷಗಳಲ್ಲಿ ಅದ್ಭುತ ಸಾಧನೆಯನ್ನು ಮಾಡಿ ಮಾದರಿ ಸಹಕಾರಿ ಸಂಸ್ಥೆಗಳಲ್ಲೊಂದಾಗಿದೆ. ಈ ಸಹಕಾರಿಯ ವಾರ್ಷಿಕ ಸಭೆಯೆಂದರೆ ಸದಸ್ಯರಿಗೆ ಹಬ್ಬವಿದ್ದಂತೆ ಎಂದು ಹೇಳುತ್ತಾರೆ ಈ ಸಹಕಾರಿಯ ಆಡಳಿತ ಮಂಡಳಿಯವರು ಹಾಗೂ ಸದಸ್ಯರು. ಇವರ ಮೃದು ನುಡಿ ನಗುಮುಖದ ಸ್ವಾಗತ ಇವರು ಜನರಲ್ಲಿ ತೋರುತ್ತಿರುವ ಆತ್ಮೀಯತೆಯಿಂದ ಈ ಸಹಕಾರಿಯಲ್ಲಿ



ಶ್ರೀ ಎಂ.ಎಸ್.ವೆಂಕಟೇಶ

ವರ್ಷದಿಂದ ವರ್ಷಕ್ಕೆ ಏರುತ್ತಿರುವ ಠೇವಣಿದಾರರ ಉತ್ಸಾಹದಲ್ಲಿ ವೃದ್ಧಿಯಾಗುತ್ತಿದೆ. ಕೇವಲ ವ್ಯವಹಾರಕ್ಕೆ ಮಾತ್ರ ಸಮಯವನ್ನು ಮೀಸಲಾಗಿಡದೆ ಆರ್ಥಿಕ ಶಿಸ್ತಿನ ಪಾಠವನ್ನು ಹೇಳಿಕೊಡುವ ಪ್ರವೃತ್ತಿಯುಳ್ಳವರಾಗಿದ್ದಾರೆ.

ಸದಸ್ಯರನ್ನು ಸಾಲಗಾರರನ್ನಾಗಿಸುವ ಬದಲು ಸಬಲರನ್ನಾಗಿ ಠೇವಣಿದಾರರನ್ನಾಗಿಸುವ ಸಮಾಜದಲ್ಲಿ ಗೌರವಾನ್ವಿತರನ್ನಾಗಿಸುವಲ್ಲಿ ಇವರು ಹೆಚ್ಚಿನ ಮಹತ್ವ ನೀಡುತ್ತಿದ್ದಾರೆ. ಇದರಿಂದಾಗಿಯೆ ಲಾಭನಷ್ಟ ತಃಖ್ತೆಗಳು ಏರುಗತಿಯಲ್ಲಿನ್ನೆ ಬಿಂಬಿಸುತ್ತವೆ. ಶೇರುದಾರರು, ಠೇವಣಿದಾರರು ಸಾಲಗಾರರು ಸಂಸ್ಥೆಯ ನೌಕರರು ಎಲ್ಲರನ್ನು ಸಮಾನ ದೃಷ್ಟಿಯಿಂದ ನೋಡುವ ಸಾಧಕರನ್ನು ಸನ್ಮಾನಿಸುವ ಕಾರ್ಯಕ್ರಮಗಳನ್ನು ಶ್ರೀಯುತರು ಹಾಕಿಕೊಳ್ಳುತ್ತಿರುವುದರಿಂದ ಸಂಸ್ಥೆಯ ಜನಪ್ರಿಯತೆಯು ಹೆಚ್ಚುತ್ತಲಿದೆ. ಹೆಚ್ಚಿಸಿದೆ. ಕಳೆದ ಸಾಲಿನಲ್ಲಿ ಶಿವಮೊಗ್ಗದಲ್ಲಿ ಶಾಖೆಯನ್ನು ತೆರೆದು ತನ್ನ ಸೇವಾಕ್ಷೇತ್ರವನ್ನು ವಿಸ್ತರಿಸಿಕೊಂಡಿದೆ.

ಈ ಶಾಖೆಯ ವಾರ್ಷಿಕೋತ್ಸವ ಸಧ್ಯದಲ್ಲಿಯೆ ಜರುಗಲಿದೆ. ಈ ಸಹಕಾರಿಯ ಉಪಾಧ್ಯಕ್ಷ ಶ್ರೀ ಬಿ.ಗಂಗಾಧರರವರು ಶ್ರೀಯುತ ವೆಂಕಟೇಶ ಇವರೆ ನಮ್ಮೆಲ್ಲ ಆಡಳಿತ ಮಂಡಳಿಯ ಪ್ರೇರಕ ಶಕ್ತಿಯೆಂದು ಹೇಳುತ್ತಾರೆ. ಸೇವಾಮನೋಭಾವದ ತತ್ವಾಧಾರಿತ ಆಡಳಿತ ಮಂಡಳಿಯು ಶ್ರೀ ವೆಂಕಟೇಶರವರಿಗೆ ನಿರಂತರ ನೆರವು ಹಾಗೂ ಸಹಕಾರ ನೀಡುತ್ತಲಿದೆ. ಯಶಸ್ಸು ಒಂದು ಗುರಿಯಲ್ಲ ಒಂದು ನಿರಂತರ ಪಯಣ ಎಂದು ಬಲವಾಗಿ ನಂಬಿದ ಈ ಸಂಸ್ಥೆಯ ಚಟುವಟಿಕೆಗಳು ಬೇರೆ ಸಹಕಾರಿಗಳಿಗೆ ಮಾದರಿ. ಸಂಸ್ಥೆಯ ಅಧ್ಯಕ್ಷ ಶ್ರೀ ವೆಂಕಟೇಶರವರ ಹಾಗೂ ಆಡಳಿತ ಮಂಡಳಿಯವರ ತತ್ವ ನಿಷ್ಠ, ನಿಸ್ವಾರ್ಥ ಹಾಗೂ ಕ್ರಿಯಾಶೀಲ ಸೇವೆಯೂ ಒಂದು ಮಾದರಿ.

# 57 ನೇ ಅಖಿಲ ಭಾರತ ಸಹಕಾರ ಸಪ್ತಾಹ

57 ನೇ ಅಖಿಲ ಭಾರತ ಸಹಕಾರ ಸಪ್ತಾಹವನ್ನು ರಾಷ್ಟ್ರಾದ್ಯಂತ ದಿನಾಂಕ 14–11–2010 ರಿಂದ 20–11–2010 ವರೆಗೆ ಯಶಸ್ವಿಯಾಗಿ ಆಚರಿಸಲು ರಾಷ್ಟ್ರೀಯ ಸಹಕಾರಿ ಯೂನಿಯನ್ ನಿರ್ದೇಶನವನ್ನು ನೀಡಿದೆ. ಸಹಕಾರ ಸಂಘಗಳು ನಿರ್ವಹಿಸಬೇಕಾದ ಜವಾಬ್ದಾರಿ ಹಾಗೂ ಅನುಷ್ಠಾನಗೊಳಿಸಬೇಕಾದ ಕಾರ್ಯಕ್ರಮಗಳ ಕುರಿತು ಹೆಚ್ಚಿನ ಪ್ರಚಾರ ಸಪ್ತಾಹವನ್ನು ಆಚರಿಸುವ ಮುಖ್ಯ ಉದ್ದೇಶವಾಗಿದೆ.ಆದ್ದರಿಂದ ಎಲ್ಲ ಸಹಕಾರ ಸಂಘಗಳು ಸಹಕಾರ ಸಪ್ತಾಹದ ಆಚರಣೆಗೆ ಹೆಚ್ಚಿನ ಮಹತ್ವ ನೀಡಿ ಆಚರಿಸಲು ಕೋರಿದೆ.

ಸಪ್ತಾಹದ ಧ್ಯೇಯ : ಸಹಕಾರ ಸಂಸ್ಥೆಗಳ ಮೂಲಕ ಹವಾಮಾನ(ವಾತಾವರಣ) ಬದಲಾವಣೆಯನ್ನು ವೃದ್ಧಿಸುವುದು
ಸಪ್ತಾಹದ 7 ದಿನಗಳ ಆಚರಣೆಯ ವಿವರಗಳು ಈ ರೀತಿಯಿವೆ.

| | |
|---|---|
| 14–11–2010 | ಹವಾಮಾನ ವೈಪರೀತ್ಯ ಬದಲಾವಣೆಯಲ್ಲಿ ಸಹಕಾರ ಸಂಸ್ಥೆಗಳ ಪಾತ್ರ<br>Combating climate change- Role of co-operatives. |
| 15–11–2010 | ಸಹಕಾರ ಸಂಸ್ಥೆಗಳಲ್ಲಿ ವೃತ್ತಿಪರತೆಗಾಗಿ ಸಾಮರ್ಥ್ಯ ನಿರ್ಮಾಣ<br>Capacity Building for Proffessionalisation in Co-operatives |
| 16–11–2010 | ಮಹಿಳೆ ಯುವಜನರಮತ್ತು ದುರ್ಬಲ ವರ್ಗದವರ ನಡುವೆ ಸಹಕಾರ ಅಭಿವೃದ್ಧಿ ಮಾದರಿಯನ್ನು ಜನಪ್ರಿಯ ಗೊಳಿಸುವುದು.<br>Popularising Co-Operative Model of Development amongst Women,Youth & Weaker – section |
| 17–11–2010 | ಸಹಕಾರಿ ನಾಯಕತ್ವ,ಉತ್ತಮ ಆಡಳಿತ ಮತ್ತು ಪ್ರಜಾಪ್ರಭುತ್ವ<br>Co-operative Leadership,good government & Democracy |
| 18–11–2010 | ಸಹಕಾರಿಹೆಸರನ್ನು ಒಂದು ಚಿಹ್ನೆಯಾಗಿ ಗುರುತಿಸಲು ಪ್ರಯತ್ನಿಸುವುದು.<br>Co-operative Identity through Brand Building |
| 19–11–2010 | ಕ್ಷೇತ್ರವಾರು ಸಹಕಾರಿಗಳ ಆತ್ಮಾವಲೋಕನ ಮತ್ತು ಮುಂದಾಲೋಚನೆ<br>Introspection and Envisioning by Sectoral Cooperatives |
| 20–11–2010 | ಆಹಾರ ಭದ್ರತೆಗಾಗಿ ಸಹಕಾರಿಗಳ ಪಾತ್ರ<br>Co-operatives Contribution towards Food Security. |

ಸಹಕಾರ ಕ್ಷೇತ್ರವು ಅಭಿವೃದ್ಧಿ ಹೊಂದಲು ಹಾಕಿಕೊಳ್ಳಬೇಕಾದ ಕಾರ್ಯಕ್ರಮಗಳ ಬಗ್ಗೆ ಜನಸಾಮಾನ್ಯರ ಗಮನಕ್ಕೆ ತರುವುದಕ್ಕಾಗಿ
ಸಭೆ ಸಮಾರಂಭಗಳನ್ನು ಏರ್ಪಡಿಸಿ ಜನ ಸಾಮಾನ್ಯರಲ್ಲಿ ಸಹಕಾರ ಕುರಿತಾದ ಜನ ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬಹುದಾಗಿದೆ.

ಇವರಿಂದ ಪ್ರಕಟಿತ : ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ, ಮೊದಲ ಮಹಡಿ, ನಂ. 132, ಕೆಂಗಲ್ ಹನುಮಂತಯ್ಯ ರಸ್ತೆ, ಬೆಂಗಳೂರು– 560 002
ಸಂಪಾದಕ, ಪ್ರಕಾಶಕ: ಶರಣಗೌಡ ಪಾಟೀಲ, ಮುದ್ರಣ : ದುರ್ಗಾ ಕಮ್ಯುನಿಕೇಷನ್ಸ್, ಬೆಂಗಳೂರು ಸಂಚಿಕೆ ಸಿದ್ಧತೆ ಎ.ಜೆ.ಕಾರಕೂನ